# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 5 ಮೇ 2000

### ಈ ಸಂಚಿಕೆಯಲ್ಲಿ





ಅಸೋಸಿಯೇಷನ್ನಿನಲ್ಲಿ... ರಾಮನವಮಿ ಕಾರ್ಯಕ್ರಮ 2

ಕವನಗಳು

ಅಸೋಸಿಯೇಷನ್ನಿನಲ್ಲಿ ಜೂನ್ ತಿಂಗಳ ಕಾರ್ಯಕ್ರಮ 3



ಬಂಗಾಳಿ ಮಹಿಳೆ ಮಧುಶ್ರೀ ದತ್ತ ಅವರಿಂದ
ಮರುಹುಟ್ಟು ಪಡೆದ ಅಕ್ಕಮಹಾದೇವಿ • ಡಾ॥ ಗಿರಿಜಾ ಶಾಸ್ತ್ರಿ 4



ನಿಜದ ನೆಲೆಯ -ಮುಂಬಯಿ ಪತ್ರ • ಡಾ॥ ಜಿ. ಎನ್. ಉಪಾಧ್ಯ 6

ಸಾಂಸ್ಕೃತಿಕ ಇತಿಹಾಸ (ಹಿನ್ನೆಲೆ) • ಸುಮಾ ದ್ವಾರಕಾನಾಥ್ 7

Impeccable Ways of God

Golden Rules for happiness 8

ಊಹಾ ಶಕ್ತಿ • ಪ್ರಸಾದ್ 9

ಕಾರಂತರು ಮತ್ತು ವಿಜ್ಞಾನ ಹಾಗೂ ಪರಿಸರ • ಡಾ॥ ವ್ಯಾಸರಾವ್ ನಿಂಜೂರ 10

ತಾಯಿ • ಪ್ರಸಾದ್ 14

ಸುತ್ತಮುತ್ತ 15

**The Mysore Association, Mumbai**
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ರಾಮನವಮಿ ಕಾರ್ಯಕ್ರಮ

ರಾಮಾಯಣದ ಕಥೆ ಗೊತ್ತಿಲ್ಲದವರೇ ಇಲ್ಲ. ರಾಮಾಯಣದ ಕಥೆಯು ನಡೆದು ಯುಗಗಳೇ ಕಳೆದರೂ ಇನ್ನೂ ಪ್ರಚಾರದಲ್ಲಿದೆ. ''ಯಾವ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹಾತಲೇ, ತಾವತ್ ರಾಮಾಯಣ ಕಥಾ ಲೋಕೇಷು ಪ್ರಚರಿಶ್ಯತಿ'' ಎಂದು ರಾಮಾಯಣದ ಕಾಲದಲ್ಲೇ ಹೇಳಿದ್ದಾರೆ. ಅಂದರೆ ಪರ್ವತಗಳು, ನದಿಗಳು ಮೊದಲಾದವು ಇರುವಷ್ಟು ಕಾಲವೂ ರಾಮಾಯಣವು ಲೋಕದಲ್ಲಿ ಪ್ರಚಾರದಲ್ಲಿರುತ್ತದೆ ಎಂದು. ರಾಮನು ಯುಗ ಪುರುಷ, ಆದರ್ಶ ಪುರುಷ, ಪಿತೃವಾಕ್ಯ ಪರಿಪಾಲಕ ಎಂದು ಅನೇಕ ಬಿರುದುಗಳನ್ನು ಹೊಂದಿದ್ದಾನೆ. ನಮ್ಮ ವಾಗ್ಗೇಯಕಾರರೆಲ್ಲರೂ ರಾಮನ ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ತ್ಯಾಗರಾಜರಿಗಂತೂ ರಾಮನೇ ಆರಾಧ್ಯ ದೈವ, ಅವರ ಕೃತಿಗಳೆಲ್ಲವೂ ರಾಮನ ಕುರಿತದ್ದೇ. ಚೈತ್ರ ಶುದ್ಧ ನವಮಿ ಶ್ರೀರಾಮನ ಜನ್ಮ ದಿನ, ಅಂದು ಭಾರತಾದ್ಯಂತ ಅನೇಕ ಕಡೆಗಳಲ್ಲಿ ಜನ್ಮದಿನವನ್ನು ಬಹಳ ವಿಜೃಂಬಣೆಯಿಂದ ಆಚರಿಸುತ್ತಾರೆ. ಇದು ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ತೋರಿಸುತ್ತದೆ.

ಎಂದಿನಂತೆ ಅಸೋಸಿಯೇಷನ್ನಿನಲ್ಲಿ ಈ ವರ್ಷವೂ (12-4-2000)ದಂದು ರಾಮ ನವಮಿ ಯನ್ನು ಆಚರಿಸಿದರು. ಅಸೋಸಿಯೇಷನ್ನಿನ ಕೆಲವು ಮಹಿಳಾ ಸದಸ್ಯರು ಸೇರಿ ಶ್ರೀಮತಿ ಸೀತಮ್ಮ ರಾವ್‌ರವರ ನೇತೃತ್ವದಲ್ಲಿ ಒಂದು ಘಂಟೆಯ ಕಾಲ ಭಜನೆಯನ್ನು ಮಾಡಿದರು. ರಾಮನ ಗುಣಗಾನಗಳನ್ನು ಕುರಿತ ಅನೇಕ ಹಾಡುಗಳನ್ನು ಹಾಡಿದರು. ಶ್ರೀಮತಿ ಶ್ಯಾಮಲಾರವರು ರಾಮನ ಕುರಿತು ಪುರಂದರ ದಾಸರ ವಿರಚಿತ ''ಕರ್ಮಬಂಧನಾ ಛೇದನಾ'' ಎಂಬ ದೇವರ ನಾಮವನ್ನು ಹೇಳಿದರು. ರಾಮನಾಮದ ಮಹಿಮೆ ಎಷ್ಟೆಂದರೆ ರಾಮನಾಮ ನೆನೆದಲ್ಲಿ ನಮ್ಮ ಕರ್ಮಬಂಧನಗಳೆಲ್ಲಾ ಛೇದನವಾಗುವುದರಲ್ಲಿ ಸಂಶಯವೇ ಇಲ್ಲ, ನಂತರ ಶ್ರೀಮತಿ ಸೀತಮ್ಮನವರು ''ಒಡಿಬಾರಯ್ಯ ವೈಕುಂಠಪತಿ...'' ಎಂಬ ಪುರಂದರದಾಸರ ದೇವರ ನಾಮವನ್ನು ಹಾಡಿದರು. ನಂತರ ಡಾ. ಮಂಜುನಾಥ್‌ರವರು ''ಐಬರ್ ರಾಮರಸಂ'' - ಎಂಬ ಹಾಡಿನಿಂದ ಶ್ರೋತೃಗಳಿಗೆ ರಾಮರಸ ಪಾನ ಮಾಡಿಸಿದರು. ನಂತರ ಪುರಂದರದಾಸರ ಎರಡು ದೇವರ ನಾಮಗಳು ರಾಮನ ಕುರಿತು ಹೇಳಿದರು:

ಅಸೋಸಿಯೇಷನ್ನಿನ ಹಿರಿಯ ಸದಸ್ಯೆ ಶ್ರೀಮತಿ ಇಂದಿರಾ ಐಯ್ಯಂಗಾರ್‌ರವರು ಮೈಸೂರು ವಾಸುದೇವಾಚಾರ್ಯರ 'ಭಜರೇ ಮಾನಸ' ಎಂಬ ಕೃತಿಯನ್ನು ಹಾಡಿದ ಮೇಲೆ ಶಾಸ್ತ್ರಿಗಳಿಂದ ರಾಮದೇವರ ಪೂಜೆ ಮಂಗಳಾರತಿ ನಡೆಯಿತು. ಶ್ರೀಮತಿ ಸೀತಮ್ಮ ಹಾಗೂ ಭಾರತೀ ಪ್ರಸಾದ್‌ರವರು ''ವಂದನಂ ರಘುನಂದನಂ...'' ಎಂಬ ಕೃತಿಯಿಂದ ವಂದನಾರ್ಪಣೆ ಮಾಡಿದ ನಂತರ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

# ಜಾರಿದ ನಕ್ಷತ್ರಕ್ಕೆ

ಯಾಕವಾ ತಂಗೀ
ಹಿಂಗ ಮಾಡ್ಕೊಂಡೀ
ಪಟ್ಟಂತ ಜೀವಾ
ಕಳ್ಕೊಂಡೀ

ಅಲ್ಲವಾ ಹುಚ್ಚೀ
ಚಿಕ್ಕಾಕಿದ್ದಿ
ಚೆಕ್ಕನ ಹೊಳೀತಿದ್ದಿ
ಚಿಕ್ಕಾಗಿ ಹೋಗಿಬಿಟ್ಟೆ
ಬಂತೇನಾ ಹೇಳ,
ನಿನ ಸಾವಿಗಿ ಅಳಂಗಿಲ್ಲ
ನಾ
ಬೇಜಾರ ಕಳೆದಿ ಅನ್ನ,

ನಿನ್ನಂಗ ಹಗ್ಗತ್ನ ಜೋಲಪ್ರಿಗಾಗಿ
ವಜ್ರಾ ನುಂಗಪ್ರಿಗಾಗಿ
ನೀಡೂವಷ್ಟು ನನ್ನ
ತಣ್ಣೀರು ಸೇವಿಯಲ್ಲ
ಆದರೂ,

ಎದೀ ಮೂಲ್ಯಾಗ ಏನೋ
ಬತ್ತಿದಂಗ ಅಗ್ತೈತಿ
ನನಗ
ಹುಚ್ಚಿ,

ನೀ ಸತ್ತರ ತಾಜಮಹಲ
ಕಟ್ಟಸೂ ಶಹಜಹಾನ
ರಿಲ್ಲೀಗ
ಬೇಕಾದ,

ನಿನಗೋರಿ ಮ್ಯಾಲಿನ
ಗುಲಾಬಿ ಹಿಡಕೊಂಡು
ಹುಡಿಗ್ಯಾರ ಜೋತಿ
ಹಾಡಾತ ಹೋಗ್ತಾರ
ಸತ್ರೇನ ಬಂತ ಹೇಳು
ಇದ್ದ ತೋರಿಸಬೇಕು
ತುಳಿಯುವ್ರ ಎದಿಗಿ
ಒದ್ದಂಗ ಬದುಕಬೇಕು

-- ಶಶಿಕಲಾ ವಸ್ತ್ರರ್

ಕೃಪೆ : 'ಅಖಿಲ ಕರ್ನಾಟಕ ಲೇಖಕಿಯ ಸಮ್ಮೇಳನ', ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್

# ನೀನು

ಅವರಿವರು ಹೇಳುವುದನ್ನು ಕೇಳಿ
ನೀನು ಹಾಗಿರಬಹುದು, ಹೀಗಿರಬಹುದು
ಎಂದೆಲ್ಲ ನಿನ್ನ ಬಗೆಗೆ
ಏನೇನೋ ಅಳಿದುಕೊಂಡಿದ್ದೆ
ನನ್ನದೇ ಆದ ಕಲ್ಪನೆಯ ಮೂಸೆಯಲ್ಲಿ
ಒಪ್ಪವಾಗಿ ಎರಕ ಹೊಯ್ದಿದ್ದೆ
ಅದರೊಂದು ದಿನ
ಎಲ್ಲರ ಹೇಳಿಕೆ ಕೇಳಿಗಿಂತ ಮಿಗಿಲಾಗಿ
ಕಣ್ಣೆದುರೇ ನಿನ್ನನ್ನು ಕಂಡಾಗ
ಪರಿಚಯಿಸಿಕೊಂಡು ಕೆಳೆತನ ಬಯಸಿದಾಗ
ಆದದ್ದೇ ಬೇರೆ !
ನನ್ನ ಅಭಿಮಾನದ ಕೋಟೆಗೆ ಲಗ್ಗೆಯಿಕ್ಕಿ
ಅಟ್ಟಹಾಸದ ನಗುವಿನಟ್ಟಕ್ಕೇರಿದ್ದೆ
''ಗಳಸ್ಯ ಕಂಠಸ್ಯ'' kith & kin ಎಂದೆಲ್ಲ
ಸನಿಹದವರ ಪರಿಹಾಸಕೊಳಗಾದಾಗ
ಒಡನಾಟದ ಹಾಸುಹೊಕ್ಕಿನಲ್ಲಿ
ನಾನು ನಾನಾಗಿರಲಿಲ್ಲ - ಹೌದು
ನೀನೂ ನೀನಾಗಿ ಉಳಿದಿರಲಿಲ್ಲ
ಅವರಿವರು ಹೇಳಿದಂತೆ ಅಷ್ಟೇ ಅಲ್ಲ
ಅದಕ್ಕಿಂತಲೂ ಮಿಗಿಲಾದ ಭಿನ್ನ ನಿಲುವು ತಳೆದು
ನನ್ನ ಪಾಲಿಗೆ ನೀನು ಬೇರೆಯಾಗಿಯೆ ಉಳಿದಿದ್ದೆ
ಆದರೂ
ಬೇರ್ಪಡಿಸಲಾರದಷ್ಟು ಹತ್ತಿರಕ್ಕೆ ಬಂದು ಬಿಟ್ಟಿದ್ದೆ

-- ಕುಲಶೇಖರಿ

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

Agents For
INDIAN AIRLINES &
JET AIRLINES

**REGD. OFFICE :**
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

**ALSO AT :**
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

## ಜೂನ್ ತಿಂಗಳಲ್ಲಿ

ಶನಿವಾರ ೧೦ನೇ ತಾರೀಖು ಸಂಜೆ ೬-೩೦ಕ್ಕೆ ಮೈಸೂರು ಅಸೋಸಿಯೇಶನ್ನಿನ ಸಭಾಂಗಣದಲ್ಲಿ

ಬೆಂಗಳೂರಿನ ಹೆಸರಾಂತ ಕಲಾವಿದರಿಂದ ಸುಗಮ ಸಂಗೀತ

ಗಾಯಕರು : ವೈ. ಕೆ. ಮುದ್ದುಕೃಷ್ಣ, ರಾಜು ಅನಂತಸ್ವಾಮಿ

ಗಾಯಕಿಯರು : ರತ್ನಮಾಲ ಪ್ರಕಾಶ್, ಮಾಲತಿ ಶರ್ಮಾ

ಪಕ್ಕವಾದ್ಯ

ಕೊಳಲು : ಎನ್. ಎಸ್. ಮುರಳಿ

ಮ್ಯಾಂಡೋಲಿನ್ : ಎನ್.ಎಸ್. ಪ್ರಸಾದ್

ತಬಲ : ದೇವನ್ಬು

ಕೀಬೋರ್ಡ್ : ಕೃಷ್ಣ ಉಡುಪ

ಗಿಟಾರ್ : ಸುದರ್ಶನ್

*ಸರ್ವರಿಗೂ ಆದರದ ಸ್ವಾಗತ*

## PROGRAMME IN JUNE

On Saturday the 10th June 2000, at 6.30 p.m. at the Mysore Association Auditorium

**Light musical programme by well-known artists from Bangalore**

Singers : Y. K. Muddu Krishna, Raju Anathaswami
Ratnamala Prakash, Malathi Sharma

Accompanying Instruments

Flute : N. S. Murali

Mandolin : N. S. Prasad

Tabla : Devanbu

Guitar : Sudharshan

**All are co-orderly invited**

ಕಲಾವಿದರ ಬಗ್ಗೆ :

## ಯಡಕೆರೆ ಕೃಷ್ಣಗೌಡ ಮುದ್ದು ಕೃಷ್ಣ



ಯಡಕೆರೆ ಕೃಷ್ಣಗೌಡ ಮುದ್ದು ಕೃಷ್ಣ ಅವರದು ವೈವಿಧ್ಯಪೂರ್ಣ ಅಭಿರುಚಿ, ಆಸಕ್ತಿ. ರಂಗಭೂಮಿ, ಸುಗಮ ಸಂಗೀತ, ಜಾನಪದ, ಸಾಂಸ್ಕೃತಿಕ ಸಂಘಟನೆ ಹೀಗೆ ಹಲವು ಹತ್ತು ಬಗೆ

ಮುದ್ದುಕೃಷ್ಣರ ಪ್ರಧಾನ ಸೆಳೆತ ಸುಗಮ ಸಂಗೀತ. ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರದ ಮನ್ನಣೆ ಪಡೆದ ಗಾಯಕ. ರಾಜ್ಯಾದ್ಯಂತ ಇವರ ಸಂಗೀತ ಕಾರ್ಯಕ್ರಮಗಳು ಅನೇಕ. ಪಟ್ಟದಕಲ್ಲು - ನವರಪುರಗಳ ಸಂಗೀತೋತ್ಸವ, ದಸರಾ ಸಾಂಸ್ಕೃತಿಕ ಉತ್ಸವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಇವರ ಸುಗಮ ಸಂಗೀತ ಕಾರ್ಯಕ್ರಮ. ಅಮೇರಿಕಾದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ ನಲವತ್ತೈದು ದಿನಗಳ ಕಾಲ ಭಾವಗೀತೆ ಕಾರ್ಯಕ್ರಮ ನೀಡಿದ ದಾಖಲೆ.

ಸುಗಮ ಸಂಗೀತದ ಬೆನ್ನು ಹತ್ತಿ ಸಾವಿರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ನೂರಾರು ನಾಟಕಗಳಲ್ಲಿ ಕಲಾವಿದರಾಗಿ ಅಭಿನಯಿಸಿ ಕೆಲವು ನಾಟಕಗಳನ್ನು ನಿರ್ದೇಶಿಸಿದ್ದಾರೆ. ನೂರಾರು ಧ್ವನಿಸುರುಳಿಗೆ ಹಾಡಿರುವುದಲ್ಲದೆ ಸ್ವತಃ ೨೫ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಶ್ರೀಯುತರ ವಿವಿಧ ಕ್ಷೇತ್ರದ ಸಾಧನೆಗೆ ಸಂದ ಗೌರವ ಪುರಸ್ಕಾರಗಳು ಅನೇಕ.



### RATNAMALA PRAKASH

**Ratnamala Prakash,** gifted with a distinct duloet voice, Ratnamala is one of the most popular 'Sugam Sangeet' artists of the State. Daughter of the renowned Carnatic vocalist R. K. Srikantan, Ratnamala naturally had her initiation in the classical style. But soon the new wave in the form of light music attracted her and as she started intoning popular Kannada lyrics in the intensity of a Soprono, both the verses and the musical style itself assumed a new dimension. Indeed, she is a priceless gift to that genre from the classical mode.

Today, Ratnamala is an artiste who is in great demand – as a soloist, as a duetist with the euphonic outpourings of Malati Sharma and in groups. She has enriched the melodies in more than 100 audiocassettes and some select movies.

Ratnamala, who has many coveted awards to her credit, including the prestigious State award, has enjoyed the rate distinction of accompanying the Sitar maestro, Pandit Ravi Shankar to Russia for the Russian festival.

Dear Member,

We have been sending intimation to members regarding the arrears in their membership subscription. Kindly note that the membership subscription is payable in advance for each year before the 31st May.

Please ensure that your membership subscription is upto date by clearing the dues before 31st May 2000.

Hon. Secretary
**The Mysore Association**

# ಬಂಗಾಳಿ ಮಹಿಳೆ ಮಧುಶ್ರೀ ದತ್ತ ಅವರಿಂದ ಮರುಹುಟ್ಟು ಪಡೆದ ಅಕ್ಕಮಹಾದೇವಿ

ಡಾ. ಗಿರಿಜಾ ಶಾಸ್ತ್ರಿ

'ಎನಗೇಕಯ್ಯ ಸಾವ ಪ್ರಪಂಚಿನ ಪುತ್ಥಳಿ ನಾನು'

ಈ ಸಾವ ಪ್ರಪಂಚಿನ ಪುತ್ಥಳಿ ತನ್ನೊಳಗೇ ಸ್ಪಷ್ಟವಾಗಿ ಗೆರೆಮೂಡಿಸಿಕೊಂಡ ಚೆನ್ನಮಲ್ಲಿಕಾರ್ಜುನನೆಂಬ ಗುರಿ ಆದರ್ಶ, ಆವೇಶಗಳನ್ನು ತನ್ನ ಮೈ ಹಾಗೂ ಮನದ ತುಂಬ ತುಂಬಿಕೊಂಡು, ಆ ನೆಲೆಯಲ್ಲಿ ಗುಡ್ಡ ಗಹ್ವರ, ಕಾಡು ಮೇಡು ಅಲೆಯುತ್ತಾ ನಡೆದಳು. ತನಗೆ ನಂಬಿಕೆ ಇಲ್ಲದ ಅಥವಾ ಲೌಕಿಕದ ಅನೇಕ ಸಿಕ್ಕು ತೊಡರುಗಳಲ್ಲಿ ಸಿಕ್ಕ ಅಕ್ಕಮಹಾದೇವಿ ಅದನ್ನು ಬಿಡಿಸಿಕೊಳ್ಳುವ ಯತ್ನದಲ್ಲಿ ತನ್ನೊಳಗಿನ ಶೋಧಕಿಯನ್ನು ಸದಾ ಜಾಗೃತವಾಗಿಟ್ಟುಕೊಂಡವಳು. ಇತ್ತ ತನ್ನ ಸುತ್ತಲಿನ ಚಳವಳಿಯ ಯಾವ ಭರಾಟೆಗೂ ಸಿಲುಕದೇ, ಅತ್ತ ಅಲ್ಲಮ ಪ್ರಭುವಿನ ನಿರಾಕಾರ 'ಸಿದ್ಧಿ' ಸಮಾಧಿಗೂ ಒಳಗಾಗದೇ, ತಾನು ನೆಚ್ಚಿಕೊಂಡಿದ್ದುದರತ್ತ ಅಲೆಯುತ್ತಾ ಸಿಕ್ಕ 'ಭಿಕ್ಷಾನ್ನ'ಗಳನ್ನು ಉಣ್ಣುತ್ತಾ, ಹತ್ತು ಹಲವು 'ಕೆರೆ ಹಳ್ಳ ಬಾವಿಗಳ' 'ಬಹೂದಕ' ಕುಡಿಯುತ್ತಾ ಸಾಗಿದ ಒಂಟಿ ಜೀವ ಅಕ್ಕಮಹಾದೇವಿಯದು.

ಮೀರಾಳಂತೆ ಯಾವುದೇ ರಾಜವಂಶಕ್ಕೂ ಸೇರದೆ, ಕೌಶಿಕನಂತಹ ಒಬ್ಬ ಸಾಮಾನ್ಯ ಪಾಳೆಯಗಾರನೊಬ್ಬ ಸಂಪರ್ಕಕ್ಕೆ ಬಂದಳೆನ್ನಲಾದ ಈ ಅಕ್ಕಮಹಾದೇವಿ ಒಂಬೈನೂರು ವರುಷಗಳ ಕಾಲಮಾನಗಳ ವಿಕೋಪವನ್ನು ಮೀರಿ ಇಂದಿಗೂ ಉಳಿದುಕೊಂಡಿರುವುದರ. ಹಿಂದಿನ ಶಕ್ತಿಯ ಬಗೆಗೆ 'ಮಜ್ಲಿಸ್' ಸಂಸ್ಥೆಯ ಸಾಂಸ್ಕೃತಿಕ ವಿಭಾಗದ ನಿರ್ದೇಶಕಿಯಾದ ಮಧುಶ್ರೀದತ್ತ ಅವರಿಗೆ ವಿಸ್ಮಯವಿದೆ. ಕನ್ನಡಕ್ಕಿಂತ ಭಿನ್ನವಾದ ಬಂಗಾಳಿ ಸಂಸ್ಕೃತಿಯಿಂದ ಬಂದಿರುವ ಮಹಿಳೆಯಾದ ಮಧುಶ್ರೀ, ಅವರಿಗೆ 12ನೆಯ ಶತಮಾನದ ಅಕ್ಕಮಹಾದೇವಿ ಕಾಡಿರುವುದು, ಕೇವಲ ಕಾಲಮಾನವನ್ನಷ್ಟೇ ಅಲ್ಲ ಜಾತಿ, ಜನಾಂಗ, ಸಂಸ್ಕೃತಿ ಹಾಗೂ ಪ್ರಾದೇಶಿಕತೆಯನ್ನೂ ಮೀರಿ ಬೆಳೆಯಬಲ್ಲ ಶಕ್ತಿ ಅಕ್ಕಮಹಾದೇವಿಯ ವ್ಯಕ್ತಿತ್ವಕ್ಕೆ ಇದೆ ಎಂಬುದನ್ನು ತಿಳಿಸುತ್ತದೆ.

ಚೈತನ್ಯ ಪ್ರಭುವಿನ ಕಾಲಕ್ಕೆ ಅಂದರೆ ಸುಮಾರು ಹದಿನೈದನೇ ಶತಮಾನದಷ್ಟು ತಡವಾಗಿ ಬಂಗಾಳದಲ್ಲಿ ಭಕ್ತಿ ಚಳವಳಿ ಕಾಣಿಸಿಕೊಂಡಿದ್ದರಿಂದ ಚಾರಿತ್ರಿಕವಾಗಿ ಸಹಜವಾಗಿಯೇ ಮಹಿಳೆಯರು ಅಲ್ಲಿ ಕಾಣಿಸಿಕೊಳ್ಳಲಿಲ್ಲ ಎಂದು ಅಭಿಪ್ರಾಯ ಪಡುವ ಮಧುಶ್ರೀ ಅವರಿಗೆ ಅಕ್ಕಮಹಾದೇವಿಯ ವ್ಯಕ್ತಿತ್ವವೊಂದು ದೊಡ್ಡ ವಿಸ್ಮಯ ಆದ್ದರಿಂದ ಆಕೆಯ ಬಗ್ಗೆ ಸಾಕ್ಷ್ಯ ಚಿತ್ರವೊಂದನ್ನು ತೆಗೆಯಬೇಕೆಂದು ಅವರು ಶಿವಮೊಗ್ಗ ಜಿಲ್ಲೆಯ 'ಉಡುತಡಿ', ಚಂದ್ರಗುತ್ತಿ ಹಾಗೂ ಆಸುಪಾಸಿನ ದೇವಸ್ಥಾನಗಳ ಶಿಲ್ಪಕಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಕ್ಕಮಹಾದೇವಿಯ ನಗ್ನತೆ ಹಾಗೂ ಅಲ್ಲಿನ ಶಿಲ್ಪಕಲೆಗಳಲ್ಲಿ ಕಂಡು ಬಂದ ಯೋನಿ ಪೂಜೆಯ (ಲಜ್ಜಾಗೌರಿ) ಸಂಬಂಧಾಂತರಗಳ



*ಮಜ್ಲಿಸ್‌ನ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥೆ 'Scribbles on Akha' ಸಾಕ್ಷ್ಯ ಚಿತ್ರದ ನಿರ್ದೇಶಕಿ ಮಧುಶ್ರೀ ದತ್ತ*

ಮಹತ್ವವನ್ನು ಮನದಲ್ಲಿ ತುಂಬಿಕೊಂಡು ಅದರ ಸಂಶೋಧನೆಗೆಂದು ನನ್ನನ್ನು ಕರೆಸಿಕೊಂಡರು. ಅಕ್ಕಮಹಾದೇವಿಯ ಬಗೆಗಿನ ಸಾಂಪ್ರದಾಯಿಕ ಹಾಗೂ ಚರ್ವಿತ ಚರ್ವಣ ಓದನ್ನೇ ಮಹತ್ವದ್ದೆಂದು ಭಾವಿಸಿದ್ದ ಮಧುಶ್ರೀ ಅಕ್ಕನ ಬಗೆಗೆ ತೋರಿಸಿದ ವಿಶ್ವರೂಪ ಬೆರಗು ಹುಟ್ಟಿಸಿತು. ಸ್ತ್ರೀವಾದಿ ಅಧ್ಯಯನದಲ್ಲಿ ಆಸಕ್ತಿ ಇಟ್ಟುಕೊಂಡಿರುವ ನನ್ನಂತಹ ಸಾಹಿತ್ಯದ ವಿದ್ಯಾರ್ಥಿಗಳ ಸಂಶೋಧನೆಗಳ ಮಿತಿಗಳನ್ನೂ ನನಗೆ ಅವರು ತೋರಿಸಿಕೊಟ್ಟರು. ಆದ್ದರಿಂದಲೇ ಹೊಸ ಬೆಳಕಿನಲ್ಲಿ ಅಕ್ಕನನ್ನು ಕಾಣುವ ಪ್ರಯತ್ನ ಮಾಡಲು ನನಗೆ ಸಾಧ್ಯವಾಯಿತು.

ಅಕ್ಕ ಮಹಾದೇವಿಯದು ಭಕ್ತಿ ಚಳವಳಿ ಚೌಕಟ್ಟನ್ನು ಮೀರಿ ಬೆಳೆದ ವ್ಯಕ್ತಿತ್ವ ಆದ್ದರಿಂದಲೇ ಅವಳು ಎಲ್ಲ ಕಾಲಕ್ಕೂ ಪ್ರಸ್ತುತಳಾಗುತ್ತಲೇ ಬಂದಿದ್ದಾಳೆ. 12ನೇ ಶತಮಾನದ ಅವಳ ಕಾಲಾನಂತರ ಮುಂದಿನ ಶತಮಾನಗಳಲ್ಲಿ ಅವಳು ಹೇಗೆ ಬೆಳೆದು ಬಂದಳು. ಎಂಬುದಕ್ಕೆ ನಮಗೆ ಯಾವುದೇ ಚಾರಿತ್ರಿಕ ಆಧಾರಗಳೂ ದೊರಕುವುದಿಲ್ಲ. (4-5 ಸಾಹಿತ್ಯ ಕೃತಿಗಳು ಶೂನ್ಯಸಂಪಾದನೆಗಳು ಹೊರತಾಗಿ) ಹೀಗೆ 12ನೇ ಶತಮಾನದಿಂದ ನೇರವಾಗಿ ಒಂದೇ ಜಿಗಿತ 20-21ನೇ ಶತಮಾನಕ್ಕೆ ಜಿಗಿದ ಅಕ್ಕಮಹಾದೇವಿ ನಮಗೆಷ್ಟು ಪ್ರಸ್ತುತಳಾಗಿದ್ದಾಳೆ ಮತ್ತು ಅವಳನ್ನು ಈವರೆಗೆ ಹೀಗೆ ಜೀವಂತ ಹಿಡಿದಿಟ್ಟಿರುವುದರ ಹಿಂದಿನ ಶಕ್ತಿ ಯಾವುದು ಎಂಬುದೇ ಮಧುಶ್ರೀ ಅವರಿಗೆ ಮಹತ್ವದ ಪ್ರಶ್ನೆಯಾಗಿದೆ. ಕೃತಕ ಸಾಮಾಜಿಕ ರಚನೆಯ ಚೌಕಟ್ಟುಗಳನ್ನು ಆಗಾಗ್ಗೆ ಮೀರಲು ಯತ್ನಿಸಿದ ಎಲ್ಲ ಸ್ತ್ರೀ ಸಂಸ್ಕೃತಿಯ ಆಶಯಗಳೂ ತಮ್ಮ ಅಸ್ತಿತ್ವವನ್ನು ಅಕ್ಕನ ಅಸ್ತಿತ್ವದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಯಾಕೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊತ್ತ ಮೊದಲಬಾರಿಗೆ ಎತ್ತಿ ಹಿಡಿದ ಭಾರತೀಯ ಮಹಿಳೆಯೆಂದರೆ ಅಕ್ಕಮಹಾದೇವಿಯೇ. ಆದ್ದರಿಂದಲೇ ಕನ್ನಡಕ್ಕಿಂತ ಬಹಳವೇ ಭಿನ್ನವಾದ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದ ಪ್ರತಿಭಾನ್ವಿತ ಬಂಗಾಳಿ ಮಹಿಳೆ ಮಧುಶ್ರೀ ಅವರಿಗೆ ಅಕ್ಕ ತಮ್ಮದೇ ಸಂಸ್ಕೃತಿಯ ಭಾವಕೋಶಕ್ಕೆ ಸೇರಿಹೋದವಳೆಂಬಂತೆ ಭಾಸವಾಗುತ್ತದೆ. ತಮ್ಮ 'Scribbles on Akha' ಎನ್ನುವ ಸಾಕ್ಷ್ಯ ಚಿತ್ರದಲ್ಲಿ 20-21ನೇ ಶತಮಾನದ ಆಧುನಿಕ ಮಹಿಳೆಯರ ವೈವಿಧ್ಯಮಯ ಮಾದರಿಗಳನ್ನು ಅಕ್ಕಮಹಾದೇವಿಯ ಚೈತನ್ಯದ ಜೊತೆ ಸಮೀಕರಿಸುವ ಪ್ರಯತ್ನ ಮಾಡುತ್ತಾರೆ.

ಕುಟುಂಬ ಹಾಗೂ ಉದ್ಯೋಗದ ನಡುವೆ ಸಮತೋಲ ನಡೆಸುತ್ತಿರುವ ಉದ್ಯೋಗಸ್ಥ ಮಹಿಳೆಯರಲ್ಲಾಗಲೀ, ನಾಲ್ಕು ಗೋಡೆಗಳ ಮಧ್ಯೆ ಎಲ್ಲರ ಇಚ್ಛೆಗನುಸಾರವಾಗಿ ಬದುಕುವ ಗೃಹಿಣಿಯರಲ್ಲಾಗಲೀ, ಕನಸುಗಣ್ಣುಗಳಲ್ಲಿ ಬೆಡಗನ್ನು ತುಂಬಿಕೊಂಡ ಪ್ರೇಮಿಗಳಲ್ಲಾಗಲೀ, ವಿರಹಿಗಳಲ್ಲಾಗಲೀ, ಲೌಕಿಕವನ್ನು ಒತ್ತರಿಸಿ

ಅನುಭಾವದ ಹಾದಿಗುಂಟ ಸಾಗುವ ಸಾಧಕಿಯರಲ್ಲಾಗಲೀ, ಧೃಢ ನಂಬಿಕೆಯತ್ತ ಗುರಿಯಿಟ್ಟು ಬಿಡುಗಡೆಯ ದಾರಿಯಲ್ಲಿರುವ ಶೋಧಕಿರಲ್ಲಾಗಲೀ, ಸ್ವಾತಂತ್ರ್ಯದ ಅತ್ಯಂತಿಕ ಕ್ಷಣಗಳನ್ನು ಅನುಭವಿಸುವ ಮುಕ್ತ ಜೀವಿಗಳಲ್ಲಾಗಲೀ ಅಕ್ಕ ಪುರುಹುಟ್ಟನ್ನು ಪಡೆಯುತ್ತಲೇ ಬಂದಿದ್ದಾಳೆ. ಮಹಿಳೆಯೊಬ್ಬಳಲ್ಲಿ ಒಬ್ಬ ಗೃಹಿಣಿ ಹಾಗೂ ಅನುಭಾವಿ ಒಟ್ಟಿಗೇ ಜೀವಿಸಿರುತ್ತಾಳೆ ಎಂಬುದು ಮಧುಶ್ರೀ ಅವರ ಅಂಬೋಣ. ಅದನ್ನು ಅವರು ಸ್ಪಷ್ಟ ಪಡಿಸುವುದು ಹೀಗೆ. ದೈನಂದಿನ ಎಲ್ಲಾ ಚಟುವಟಿಕೆಗಳ ನಂತರ ಜಗವೆಲ್ಲ ಮಲಗಿದ ಹೊತ್ತು ಕತ್ತಲಿನ ಮಂಕು ದೀಪದ ಕಳೆಗೋ ಚಂದ್ರಮನ ಬೆಳಕಿನಲ್ಲಿಯೋ ಅಥವಾ ಯಾವುದೋ ಸ್ಫೂರ್ತಿ ಮೈಹೊಕ್ಕ ಘಳಿಗೆ ಪುಸ್ತಕ ಲೇಖನಿ ಹಿಡಿದೋ... ಇಂತಹ ತನ್ನದೆನ್ನುವ ಯಾವುದೋ ಕ್ಷಣಗಳಲ್ಲಿ ಪ್ರತಿಯೊಬ್ಬ ಮಹಿಳೆ ಆಪ್ತವಾದ ಅನುಭವವನ್ನು ಪಡೆದುಕೊಳ್ಳುತ್ತಾಳೆ. ದಿನದ ಯಾಂತ್ರಿಕತೆಯ ನಡುವೆ ಸ್ವಲ್ಪ ಹೊತ್ತು ತನ್ನದೇ ಗಳಿಗೆಗಳಲ್ಲಿ ಬದುಕುವ ಮಹಿಳೆಯ ಈ ಕ್ಷಣಗಳನ್ನೇ ಮಧುಶ್ರೀಯವರು ಬಿಡುಗಡೆಯ ಕ್ಷಣಗಳೆಂದು ಅನುಭಾವದ ಕ್ಷಣಗಳೆಂದೂ ಅಭಿಪ್ರಾಯ ಪಡುತ್ತಾರೆ. ಇಂತಹ ಬಿಡುಗಡೆಯ ಕ್ಷಣಗಳಲ್ಲಿ ಪ್ರತಿಯೊಬ್ಬ ಮಹಿಳೆಯಲ್ಲಿ ಅಕ್ಕಮಹಾದೇವಿ ಮರುಹುಟ್ಟು ಪಡೆಯುತ್ತಾಳೆ ಎಂಬುದು ಅವರ ಭಿಪ್ರಾಯ. ಇಂತಹ ಅನುಭವಗಳು ಮಹಿಳೆಯರದೇ ಆಗಬೇಕೆಂದಿಲ್ಲ. ಪುರುಷರದೂ ಆಗಬಹುದು. ಆದರೆ ಒಬ್ಬ ಸ್ತ್ರೀಯಾಗಿ ಪುರುಷರ ಅನುಭವಗಳ ಬಗ್ಗೆ ಮಾತನಾಡುವುದು ಕೇವಲ ಮೇಲ್ಪದರದ ಸಂಗತಿಯಾಗಬಹುದು ಎಂದೂ ಅವರು ಹೇಳುತ್ತಾರೆ. ಡಾ. ಬಸವರಾಜ ಕಲ್ಗುಡಿ, ಎ. ಕೆ. ರಾಮಾನುಜಂ ಮುಂತಾದ ವಿಮರ್ಶಕರಿಗೆ ಅಕ್ಕಮಹಾದೇವಿ ಬೆತ್ತಲಾಗಿ ಸಾಗಿದ್ದು ಪ್ರತಿಭಟನೆಯಾಗಿ ಕಂಡರೆ ಮಧುಶ್ರೀ ಅವರಿಗೆ ಅದು ಆದ್ಯಂತಿಕವಾದ ಬಿಡುಗಡೆಯ ಹಂತವಾಗಿ ಕಾಣಿಸುತ್ತದೆ.

ಮಹಾದೇವಿಯಾದರೋ ತಾನು ಬಯಸಿದ ಬಿಡುಗಡೆಗಾಗಿ ಲೌಕಿಕದ ಎಲ್ಲ ಬಂಧನಗಳನ್ನೂ ತೊರೆದುಕೊಳ್ಳುತ್ತಾ ಮತ್ತೆ ಮರಳಿ ಬಾರದಂತೆ ಒಮ್ಮೆಲೇ ಹೊರಟು ಬಿಟ್ಟಳು. ಇಂದಿನ ಆಧುನಿಕ ಮಹಿಳೆಯಾದರೂ ಹಾಗೇ ಮತ್ತೆ ಮರಳಿ ಬಾರದಂತೆ ನಡೆಯಲು ಸಾಧ್ಯವಿಲ್ಲವಾದರೂ ಅವಳ ನೆಲೆ ಹಾಗೂ ಮಿತಿಗಳಲ್ಲಿ ಅಕ್ಕ ಅನುಭವಿಸಿದ ಸ್ವಾತಂತ್ರ್ಯದ ಅನುಭಾವದ ಕ್ಷಣಗಳನ್ನು ಕ್ಷಣಿಕವಾಗಿಯಾದರೂ ಅನುಭವಿಸುತ್ತಾಳೆ. ಇದು ಪಲಾಯನವಾಗುವುದಿಲ್ಲವೆ ಎನ್ನುವ ಪ್ರಶ್ನೆ ಬಂದಾಗ ಅಕ್ಕ ಮಹಾದೇವಿಯನ್ನೂ ಪಲಾಯನವಾದಿಯೆಂದು ಆಕ್ಷೇಪಿಸಿದವರು ಬಹಳ ಮಂದಿ ಇದ್ದಾರೆ. ಆದರೆ ಯಾವುದು ಹೇಗಿರಬೇಕೆಂಬುದಕ್ಕೆ ಮಾನದಂಡಗಳು ಯಾವುವು? 'ಇದಮಿತ್ಥಂ' ಎಂದು ಹೇಳುವ ಮಠಾಧೀಶರ ಆದೇಶಗಳಿಗೂ ನಾವೇ ನಮ್ಮ ದೃಷ್ಟಿಕೋನಕ್ಕೆ ತಕ್ಕಂತೆ ರೂಪಿಸಿಕೊಂಡುಬಿಡುವ ಮಾನದಂಡಗಳಿಗೂ ಏನು ವ್ಯತ್ಯಾಸವಿದೆ? ಎಂದು ವಾದ ಹೂಡುವ ಈ ಚಿತ್ರದ ನಿರ್ದೇಶಕಿಯರ ಕಾಳಜಿಯಿರುವುದು ಜನಪರವಾದುದರತ್ತ. ಯಾವ ಕಾರಣಕ್ಕೂ ಜನಸಾಮಾನ್ಯರ ಬಲವಾದ ನಂಬಿಕೆಗಳನ್ನು ತಮ್ಮ ಬೌದ್ಧಿಕ ಬತ್ತಳಿಕೆಯಿಂದ ಕತ್ತರಿಸಿ ಮಠಾಧೀಶರಂತೆ ವರ್ತಿಸಬಾರದು ಎಂಬುದು ಅವರ ನಂಬಿಕೆ. ಜನಸಾಮಾನ್ಯರ ಗ್ರಹಿಕೆಗಳನ್ನು ಅವರು ಎಂದೂ ಅಪಮೌಲ್ಯಗೊಳಿಸಲಾರರು. ಆದ್ದರಿಂದಲೇ ಸಾಮಾನ್ಯ ಜನ ಅಕ್ಕನನ್ನು ಹೇಗೆ ಗ್ರಹಿಸಿದ್ದಾರೆ ಎಂಬುದು ಮಠಾಧೀಶ ರೊಬ್ಬರು ಗ್ರಹಿಸಿರುವಷ್ಟೇ ಮುಖ್ಯವಾಗುತ್ತದೆ. ಅಕ್ಕಮಹಾದೇವಿಯು ಸಮಾಜದಲ್ಲಿ ಇಂದು ಮಾರಾಟದ ಸರಕಾಗಿದ್ದಾಳೆ. ಅವಳ (Export quality) ಅವಳ ಹೆಸರಿನ ಚಟ್ನಿಪುಡಿ, ಸಾಂಬಾರು ಪುಡಿಗಳು ಅತ್ಯಂತ ಬೇಡಿಕೆಯದಾಗಿದೆ. ಅಕ್ಕಮಹಾದೇವಿ ಹೀಗೆ brand name ಆಗಿರುವುದಕ್ಕೂ, ಈ ಚಿತ್ರದಲ್ಲಿ ತಮ್ಮ ಉದ್ದೇಶಕ್ಕಾಗಿ ಅವಳನ್ನು ತಾವು ಬೆಳೆಸಿಕೊಂಡಿರುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ ಎನ್ನುತ್ತಾರೆ. ಅವಳ ಹೆಸರು ಇಂದು ಯಾರ್‍ಯಾರದೋ ಹೊಟ್ಟೆ ತುಂಬಿಸುತ್ತಿದ್ದರೆ. ಅದನ್ನು ದುರಪಯೋಗವೆಂದು ಯಾಕೆ ಕರೆಯಬೇಕು? ಒಬ್ಬರಿಗೆ ಹೊಟ್ಟೆಯ ಹಸಿವಿದ್ದರೆ ಇನ್ನೊಬ್ಬರಿಗೆ 'ಹೆಸರಿನ' ಹಸಿವು ಎನ್ನುತ್ತಾರೆ. ಲೇಖಕಿಯರ, ಜನ ಸಾಮಾನ್ಯರ, ಮಠಾಧಿಪತಿಗಳ ಹಾಗೂ ಕಲಾವಿದರ, ಅಭಿನೇತ್ರಿಯರ ದೃಷ್ಟಿಯ ಮೂಲಕ ಅಕ್ಕಮಹಾದೇವಿಯು ಒಂದು ಅಖಂಡ ಸ್ವರೂಪವನ್ನು (holistic) ವೀಕ್ಷಕರಿಗೆ ದಾಟಿಸುವುದೇ ಈ ಚಿತ್ರದ ಉದ್ದೇಶವಾಗಿದೆ. ಕೇವಲ ಮಠಗಳಲ್ಲೋ, ವಿದ್ವಾಂಸರ ಹೊತ್ತಿಗೆಗಳಲ್ಲೋ ಮಾತ್ರ ಅಕ್ಕ ಉಳಿದುಕೊಂಡುಬಿಟ್ಟಿದ್ದರೆ ಇಂದು ಇಂತಹ ಬಂದು ವ್ಯಾಪಕತೆ ಅವಳ ವ್ಯಕ್ತಿತ್ವಕ್ಕೆ ಬರುತ್ತಿರಲಿಲ್ಲ ಎಂಬುದು ಅವರ ಅಭಿಪ್ರಾಯವಾಗಿದೆ.

ಅಕ್ಕನ ದೈಹಿಕ ಮತ್ತು ದೈವಿಕ ಅಸ್ತಿತ್ವದ ನಡುವಿನ ದ್ವಂದ್ವವನ್ನು ಒಪ್ಪುವ ಅವರು ಸೃಷ್ಟಿ ಪೂಜೆ ಹಾಗೂ ಫಲವಂತಿಕೆಯ ಸಂಕೇತವಾದ ಸ್ತ್ರೀಲಿಂಗ ಪೂಜೆಯ ಆದಿಮ ಕ್ರಿಯೆಯನ್ನು ಅಕ್ಕಮಹಾದೇವಿಯ ನಗ್ನತೆ ಹಾಗೂ ಆ ಕಮಲ ಗಂಗವ್ವನ ಶಿಲ್ಪಗಳ ಜೊತೆಗೆ ಸಮೀಕರಿಸುತ್ತಾರೆ. ಮಧುಶ್ರೀ, ಇದನ್ನು ಪ್ರಸಿದ್ಧ ಚಿತ್ರ ಕಲಾವಿದೆ ಗುಜರಾತಿನ ನೀಲಿಮಾ ಶೇಖ್ ಅವರ ಚಿತ್ರಗಳ ಮೂಲಕ ಬಹಳ ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತಾರೆ.

ಇಲ್ಲಿ ಆಧುನಿಕ ಮಹಿಳೆ ಅನುಭವಿಸುತ್ತಿರುವ ಅವಳ ಇರುವಿಕೆ (Real self) ಹಾಗೂ ಅವಳ ಕಾಣಿಸುವಿಕೆಯ ನಡುವಿರುವ ದ್ವಂದ್ವವನ್ನು, ಅಕ್ಕನ ದೇಹ ಮತ್ತು ಆತ್ಮದ ನಡುವಿನ ಹೋರಾಟದಲ್ಲಿ ಕಾಣುವ ಪ್ರಯತ್ನ ಮಾಡುತ್ತಾರೆ.

'ಸಾವಿಲ್ಲದ, ರೂಪವಿಲ್ಲದ ಕೇಡಿಲ್ಲದ' ಅಕ್ಕಮಹಾದೇವಿಯ ಚೈತನ್ಯವನ್ನು ಮುಂದಿನ ಜನಾಂಗಕ್ಕೂ ದಾಟಿಸಬೇಕೆಂಬ ಅರ್ಥಪೂರ್ಣ ಮುಕ್ತಾಯದಲ್ಲಿ 'ಅಕ್ಕಮಹಾದೇವಿ' ಸಂಪನ್ನವಾಗುತ್ತದೆ.

ಕನ್ನಡದ ಕವಿ, ಕಲಾವಿದ ಜನ ಸಾಮಾನ್ಯರು ಅಕ್ಕನನ್ನು ಅರ್ಥ ಮಾಡಿಕೊಂಡಿರುವುದಕ್ಕಿಂತ, ಕಲಾವಿದೆ ನೀಲಿಮಾಶೇಖ್ ಆಗಲಿ, ಮಣಿಪುರದ ಕನ್ಹಯ್ಯಲಾಲ್ ನಿರ್ದೇಶನದಲ್ಲಿ ಅಭಿನಯಿಸುತ್ತಿರುವ ಪ್ರಸಿದ್ಧ ಅಭಿನೇತ್ರಿ ಸಾವಿತ್ರಿಯವರಾಗಲೀ ಅಕ್ಕನ ಒಳಹೊಕ್ಕು ಕಂಡುಕೊಂಡಿರುವ ಪರಿ ಅದ್ಭುತವಾಗಿದೆ.

ಹೀಗೆ ಅಕ್ಕಮಹಾದೇವಿ ಐತಿಹ್ಯವಾಗಿ, ವಿದ್ವಾಂಸರ ಚರ್ಚೆಯ ವಸ್ತುವಾಗಿ, ಮಾರಾಟದ ಸರಕಾಗಿ, ಅಕ್ಕನ ಬಳಗಗಳ ಸುಮಂಗಲಿಯರ ಸೌಭಾಗ್ಯವಾಗಿ, ಮಠದ ಪಟಗಳ ಚೌಕಟ್ಟಿನೊಳಗೆ ಮೌನವಾಗಿ ಬಂಧಿತಳಾಗಿ ಈ ಒಂಬೈನೂರು ವರುಷಗಳೂ ಉಳಿದುಕೊಂಡು ಬಂದಿದ್ದಾಳೆ.

ಇದೇ ಜೂನ್ ತಿಂಗಳು ಎರಡನೆಯ ತಾರೀಖು ಮಕ್ಸಿಸ್ ಸಂಸ್ಥೆಯ ಪ್ರಸ್ತುತ ಪಡಿಸುವ "Scribbles on Akka" ಸಾಕ್ಷ್ಯ ಚಿತ್ರವು ಮಹಾಲಕ್ಷ್ಮಿಯ ರಷಿಯನ್ ಕಲ್ಚರ್ ಥಿಯೇಟರ್‌ನಲ್ಲಿ ತೆರೆಕಾಣಲಿದೆ. ಆಸಕ್ತಿಯುಳ್ಳವರಿಗೆಲ್ಲ ಆದರದ ಸ್ವಾಗತ.

*(ನಿರ್ದೇಶಕಿ ಮಧುಶ್ರೀ ದತ್ತ ಅವರೊಡನೆ ಇಂಗ್ಲೀಷಿನಲ್ಲಿ ಡಾ. ರಘುನಾಥ ಕೆ. ಅವರು ನಡೆಸಿದ ಸಂದರ್ಶನವನ್ನು ಕನ್ನಡಕ್ಕೆ ರೂಪಾಂತರಿಸಲಾಗಿದೆ)*

# ನಿಜದ ನೆಲೆಯ - ಮುಂಬಯಿ ಪತ್ರ



*ಕೆ.ಟಿ. ವೇಣುಗೋಪಾಲರವರ 'ಮುಂಬಯಿ ಪತ್ರ' ಕೃತಿಯನ್ನು ಶ್ರೀ ಎಂ. ಆರ್. ಪೈಯವರು ಬಿಡುಗಡೆಗೊಳಿಸುತ್ತಿರುವುದು.*

'ಮುಂಬಯಿ ಪತ್ರ' ಕೆ.ಟಿ. ವೇಣುಗೋಪಾಲ ಅವರ ಇತ್ತೀಚಿನ ಕೃತಿ. ಕಳೆದ ಮೂರು ದಶಕಗಳಲ್ಲಿ ಉದಯವಾಣಿ ದೈನಿಕದಲ್ಲಿ ಪ್ರಕಟವಾದ ಮುಂಬಯಿ ಪತ್ರಗಳನ್ನು ಆಯ್ದು ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ. ಅಂಕಣ ಬರೆಹಕ್ಕೆ ಇದು ಅವರ ಚೊಚ್ಚಲ ಕೊಡುಗೆ. ಸಾಹಿತ್ಯದ ಅಂಗೋಪಾಂಗಗಳಲ್ಲಿ ಅಂಕಣ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಅಂಕಣಕಾರರ ಸಾಲಿನಲ್ಲಿ ನಿರಂಜನ ಅವರದು ದೊಡ್ಡ ಹೆಸರು. ತಮ್ಮ ಅಂಕಣ ಬರೆಹಗಳ ಮೂಲಕ ಕನ್ನಡ ಅಂಕಣ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದ ಕೀರ್ತಿಗೆ ಡಾ. ಹಾ.ಮಾ.ನಾ. ಪಾತ್ರರಾಗಿದ್ದಾರೆ. ಎಚ್ಚೆಸ್ಕೆ, ಸಿದ್ದವನ ಹಳ್ಳಿ ಕೃಷ್ಣ ಶರ್ಮ, ಪಾಟೀಲ ಪುಟ್ಟಪ್ಪ, ಕು.ಶಿ. ಹರಿದಾಸ ಭಟ್ಟ ಮೊದಲಾದವರು ಅಂಕಣ ಬರೆಹಗಳಿಗೆ ಸಾಕಷ್ಟು ಮೆರಗು ನೀಡಿದ್ದಾರೆ. ಈ ಸಾಲಿನಲ್ಲಿ ಈಗ ಕೆ.ಟಿ. ವೇಣುಗೋಪಾಲ ಅವರೂ ಸ್ಥಾನ ಪಡೆದು ಕೊಂಡಿದ್ದಾರೆ.

ಅಂಕಣ ಸಾಹಿತ್ಯ ಒಂದು ರೀತಿಯಲ್ಲಿ ಸಮಯ ಸಾಹಿತ್ಯ; ಮತ್ತೊಂದು ರೀತಿಯಲ್ಲಿ ಸಮಯಾತೀತ - ಸಾಹಿತ್ಯ. ಇತರ ಅಂಕಣಕಾರರ ಬರೆಹಗಳಿಗಿಂತ ಕೆ.ಟಿ. ಅವರ ಮುಂಬಯಿ ಪತ್ರಗಳು ತುಸು ಭಿನ್ನವಾಗಿವೆ. ಇಲ್ಲಿನ ಬಹುತೇಕ ಅಂಕಣಗಳಿಗೆ ಮುಂಬಯಿಯೇ ಕೇಂದ್ರ ಬಿಂದು. ಈ ಮಹಾನಗರದಲ್ಲಿ ನೆಲೆನಿಂತವರ ಬದುಕು ಬವಣೆಗಳು. ಅವರ ಜೀವನ ಸಾಧನೆ, ವ್ಯಕ್ತಿ ವಿಶಿಷ್ಟತೆ, ಇಲ್ಲಿನ ಪರಿಸರ, ವಿಚಿತ್ರ ವಿದ್ಯಮಾನಗಳೆಲ್ಲ ಇಲ್ಲಿನ ಅಂಕಣಗಳಿಗೆ ವಸ್ತುವಾಗಿವೆ. ಈ ವೈವಿಧ್ಯತೆ ಇತರ ಅಂಕಣಕಾರರ ಬರಹಗಳಲ್ಲಿ ನಮಗೆ ಕಾಣಸಿಗುವುದಿಲ್ಲ. ಮೂರು ದಶಕಗಳ ಮುಂಬಯಿ ಬದುಕಿನ ನಾಡಿಮಿಡಿತ ಪ್ರಸ್ತುತ ಕೃತಿಯಲ್ಲಿ ದಾಖಲಾಗಿರುವುದು ಗಮನಾರ್ಹ ಅಂಶ.

ಈ ಸಂಕಲನದಲ್ಲಿ 83 ಚಿಕ್ಕ ಚಿಕ್ಕ ಪತ್ರಗಳಿಗೆ ಈ ಪತ್ರಗಳನ್ನು ಸಂಭವ -ಅನುಭವ, ಸಾಹಿತ್ಯ -ಸಂಸ್ಕೃತಿ, ಮುಂಬಯಿಯ ಸ್ವಾರಸ್ಯ, ವ್ಯಕ್ತಿ ವಿಶೇಷಗಳೆಂದು ವ್ಯವಸ್ಥಿತವಾಗಿ ಆಯ್ಕೆಮಾಡಿ ಕೊಟ್ಟಿದ್ದಾರೆ. ಒಂದು ರೀತಿಯಲ್ಲಿ ಇಲ್ಲಿನ ಬರೆಹಗಳು. ಸ್ವಚ್ಛಂದ ಬರೆಹಗಳು. ಅಲ್ಲಿ ಮುಕ್ತ ಚಿಂತನೆಯಿದೆ, ಹುಡುಕಾಟವಿದೆ, ಅವುಗಳ ಹಿಂದೆ ಅವರ ತೆರೆದ ಮನಸ್ಸಿದೆ. ಆದ್ದರಿಂದ ಈ ಎಲ್ಲ ಬರೆಹಗಳಲ್ಲಿ ಒಂದು ರೀತಿಯ ಸಾತತ್ಯ ಎದ್ದು ಕಾಣುತ್ತದೆ. ಇದು 'ಮುಂಬಯಿ ಪತ್ರ' ಸಂಕಲನದ ಧನಾತ್ಮಕ ಅಂಶಗಳಲ್ಲಿ ಒಂದು.

ಒಬ್ಬ ಅಂಕಣಕಾರ ಚರಿತ್ರಕಾರನಂತೆ ಕೆಲಸ ಮಾಡಲಾರ ಹಾಗೆ ಮಾಡಲೂಬಾರದು. ವಸ್ತುನಿಷ್ಠವಾದ, ಸಮಸಾಮಯಿಕವಾದ ವಿಚಾರಗಳನ್ನು ಕುರಿತು ಅಂಕಣಕಾರ ಬರೆಯುವುದರಿಂದ ಸಾಂಸ್ಕೃತಿಕ ಇತಿಹಾಸವನ್ನು ಆತ ತನ್ನರಿವಿಗೆ ಬಾರದಂತೆ ಕಟ್ಟಿಕೊಡುತ್ತಾ ಸಾಗುತ್ತಾನೆ. ವ್ಯಕ್ತಿಯಂತೆ, ಸಮಾಜದಂತೆ ಆತ ನೆಲೆನಿಂತ ತಾಣಕ್ಕೂ ಒಂದು ಇತಿಹಾಸವೆಂಬುದಿದೆ. ಇದನ್ನೇ ಮುನ್ನುಡಿಯಲ್ಲಿ ಲೇಖಕರು'' ಮೂರು ದಶಕಗಳ ಹಿಂದೆ ಮುಂಬಯಿಗೆ ಬಂದಾಗ ನಾನು ಈ ಮಹಾನಗರವನ್ನು ಇಷ್ಟಪಟ್ಟಿದ್ದು ಅದರ ಕಾಸ್ಮೋಪಾಲಿಟನ್ ಆಕೃತಿಗಾಗಿ. ಆಗಾಗಲೇ ಶಿವಸೇನೆ ಪ್ರಾಬಲ್ಯಕ್ಕೆ ಬಂದಿತ್ತು. ದಾಕ್ಷಿಣಾತ್ಯರ ಮುಖ್ಯವಾಗಿ ಕನ್ನಡಿಗ ಹೋಟೆಲಿಗರ ನೇರ ಟೀಕೆ, ಟಿಪ್ಪಣಿ ನಡೆದಿತ್ತು. ಆದರೆ ಮಹಾರಾಷ್ಟ್ರೀಯನ್ನರ ಈ ಪಕ್ಷ ಹಿಂದೂವಾದಿಯಾಗಿ ಬದಲಾದುದರೊಂದಿಗೆ ಎಲ್ಲಾ ಅಲ್ಪ ಸಂಖ್ಯಾಕರು ಭಯ ಭೀತಿಯಿಂದ ಜೀವಿಸುವಂತಾಯಿತು'' ಎಂದು ಗುರುತಿಸಿದ್ದಾರೆ. 1984ರ ಭಿವಂಡಿ ಗಲಭೆ, 1993ರ ಮತೀಯ ಕಲಹ ಮೊದಲಾದವು ಈಗ ಮುಂಬಯಿ ಮಹಾನಗರದ ಇತಿಹಾಸವಾಗಿದೆ. ಇತಿಹಾಸ ಹೇಳದ ಅದು ಎಂದು ದಾಖಲಿಸದ ಮನುಷ್ಯ ಸಂಬಂಧಗಳ ನಡುವಿನ ಅನೇಕ ಸತ್ಯಾಂಶಗಳು ಇಲ್ಲಿ ಮುನ್ನೆಲೆಗೆ ಬಂದಿವೆ, 'ಮಾಸಲಾಗದ ಕಲೆ'. 'ಭಿವಂಡಿ, ಅಂದು ಇಂದು', 'ಸಲಾಂ ಬಾಂಬೆ ! ಇದು ನನ್ನ ಬಾಂಬೆ ! ಮೊದಲಾದ - ಲೇಖನಗಳು ಇದೊಂದು ಕಾಸ್ಮೋಪಾಲಿಟನ್ ನಗರವೇ? ಎಂಬುದಾಗಿ ನಮ್ಮನ್ನು ಚಿಂತನೆಗೀಡು ಮಾಡುತ್ತವೆ. ಇಲ್ಲಿ ಕ್ರೌರ್ಯ, ನಿರ್ದಯತೆ, ನಗರದ ಮೆಟೀರಿಯಾಲಿಸ್ಟಿಕ್ ಬದುಕು, ಅಡ್ಡಾದಿಡ್ಡಿ ಬೆಳೆದ ಮಹಾನಗರದ ಜನದಟ್ಟಣೆ, ಗದ್ದಲ, ಪ್ರದೂಷಣೆ, ಮಾಫಿಯಾ ಚಟುವಟಿಕೆಗಳು ರಕ್ತ ಸಂಬಂಧದ ವಾಂಛೆಯನ್ನು

(ಪುಟ 16ಕ್ಕೆ)

## Congratulations !



Prof. H. S. Srinivas has recently been promoted as the Vice-principal of VJTI, Mumbai.

Srinivas, who hails from Hassan, passed out his B.Sc. from the Sharada Vilas College at Mysore. Thereafter he studied B.E. in mechanical engineering from the Malnad College of Engineering, Hassan. After his B.E., Srinivas came to Bombay in 1967and joined the IIT, Powei for M.Tech in production Engineering, After M.Tech he joined VJTI in 1970. While working there, he continued his studies further and did his Ph.D. in Welding Technology from IIT, Mumbai. Prof. Srinivas has to his credit over 20 research publications and is associated with various professional bodies like the Indian Institute of Welding, The Indian Society of Manufacturing Engineers, The Indian Institute of Production Engineers, etc.

After joining VJTI he was actively in involved in starting BE (Production) course at VJTI, first of its type in Maharashtra, which started in 1973. Over a decade ago he became the Professor of production Engineering and since last 4 years, he is heading the production Engineering Department in that Institution. He is also working in various bodies of the University of Mumbai like Board of studies in Engineering, moderation committee etc.

In 1993, under the new centralized admission scheme for engineering in Maharashtra, the task of setting up and administering a state wide pooled admission system fell upon VJTI. As officer in-charge of admission, he and his teammates developed a computerized system, which has been acclaimed as the best among those followed by the various states in the country.

Prof. Srinivas has been an active member of the Association since 1969. He has been in the Managing Committee for many years and has held the offices of the Hon. Secretary & Hon. Treasurer. A good stage artist, Srinivas has been an active member of the Association's theatre group and has the credit of having acted in the maximum number of pays presented by the Association.

Nesaru congratulates Prof. Srinivas and wishes him all the success in his future endeavors.

---

## ಸಾಂಸ್ಕೃತಿಕ ಇತಿಹಾಸ (ಹಿನ್ನೆಲೆ)

ಒಬ್ಬ. ತಂದೆ ತನ್ನ ಮಗನನ್ನು ಓದುವುದಕ್ಕೆ ಹಿರಿಯರ ಬಳಿಗೆ ಕಳುಹಿಸಿದ ಅವನು ಅಲ್ಲಿ ಓದಿ ವಿದ್ಯೆಯನ್ನು ಗಳಿಸಿ ಹಿಂತಿರುಗಿ ಬಂದ, ಅವನಿಗೆ. ಯೋಚನೆಯಾಯಿತು. 'ನಾನು ವಿದ್ಯಾವಂತ, ನಮ್ಮಪ್ಪನಿಗೆ ನಾನು ನಮಸ್ಕಾರ ಮಾಡಬೇಕೋ ಬೇಡವೋ?'' ಎಂದು.

ತಂದೆ ಬುದ್ಧಿವಂತ. ಮಗನ ಮುಖ ನೋಡುತ್ತಲೂ ಆತನಿಗೆ ತಿಳಿದು ಹೋಯಿತು. ಮಗನ ಮನಸ್ಸಿನಲ್ಲಿರುವ ಸಂಕಟ. ತಾನೇ ಎದ್ದು ಬಂದು ಮಗನನ್ನು ಹೊಗಳಿದ. ಅಪ್ಪಾ ನಿನ್ನಂತಹ ಮಗ ಹುಟ್ಟಿ ನಮ್ಮ ಕುಲಪಾವನವಾಯಿತು. ನಿನ್ನ ಹಾಗೆ ಓದಿದವರು ಯಾರು?'' ಎಂದ. ಮಗನಿಗೆ ಸಂತೋಷವಾಯಿತು.

ಇವರಿಬ್ಬರಲ್ಲಿ ಯಾರು ಸಂಸ್ಕೃತಿ ಸಂಪನ್ನರು? ತಾನು ವಿದ್ಯಾವಂತನೆಂದು ಕೊಂಡ ಮಗನೋ? ಬುದ್ಧಿವಂತನಾಗಿ ಮಗನಿಗೆ ಬಂದ ಸಂಕಟವನ್ನು ಕಳೆದ ತಂದೆಯೋ? ತಂದೆಯ ನಡೆಯಲ್ಲಿ ಹೊಂದಾಣಿಕೆ, ಹೆಚ್ಚಳ ಮತ್ತು ಹಿರಿಯತನ ಮೂರೂ ಕಂಡು ಬರುವುದೇ ಸಂಸ್ಕೃತಿ.

ಮೂಲತಃ ಸಂಸ್ಕೃತಿಯೆಂಬುದು ಒಂದೇ. ಆದರೆ ಆಯಾ ದೇಶಕ್ಕನುಗುಣವಾದ ರೀತಿಯಲ್ಲಿ ಬೇರೆಯೆಂದು ಭಾಸವಾಗುತ್ತದೆ. ಈ ದೃಷ್ಟಿಯಿಂದ ಇಡೀ ಪ್ರಪಂಚದಲ್ಲಿ ಇಂದು ಮುಖ್ಯವಾಗಿ ಇರತಕ್ಕವು ಎರಡೇ ಸಂಸ್ಕೃತಿಗಳು. ಒಂದು ಪಾಶ್ಚಾತ್ಯ ಸಂಸ್ಕೃತಿ ಮತ್ತೊಂದು ಭಾರತೀಯ ಸಂಸ್ಕೃತಿ. ಮಾನವನ ಪೌರುಷವೇ ಮುಖ್ಯವೆಂಬ ಭಾವನೆಯ ಆಧಾರದ ಮೇಲೆ ನಿಂತಿರುವುದು ಪಾಶ್ಚಾತ್ಯ ಸಂಸ್ಕೃತಿ. ಅದು ಪೌರುಷ ಪ್ರಧಾನ. ಭಾರತೀಯ ಸಂಸ್ಕೃತಿಯಲ್ಲಿ ಪೌರುಷಕ್ಕಿಂತ ಶ್ರೇಷ್ಠವಾದ ಮತ್ತು ಬೋಧಪ್ರದವಾದ ಕೆಲವು ಅಮೂಲ್ಯ ವಿಚಾರಗಳಿವೆ. ಆ ಅನರ್ಘ್ಯ ನಿಧಿಗಳನ್ನು ಭಾರತದಲ್ಲಿ ಮಾತ್ರವೇ ಕಾಣಲು ಸಾಧ್ಯ.

ಮುಂದಿನ ಜನಾಂಗ ವೆನಿಸುವ ಇಂದಿನ ಮಕ್ಕಳ ಮತ್ತು ಯುವಕ ಯುವತಿಯವರ ಶಿಕ್ಷಣವೂ ಸರಿಯಾಗಿ ನಡೆದು ಅವರನ್ನು ಸುಸಂಸ್ಕೃತರನ್ನಾಗಿ ಮಾಡಬೇಕು. ಡಾ! ರಾಧಾಕೃಷ್ಣನ್‌ರವರ ಪ್ರಕಾರ ಇಂದಿನ ವಿದ್ಯಾರ್ಥಿಗಳಲ್ಲೇನೂ ದೋಷವಿಲ್ಲ. ದೋಷವಿರುವುದು ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ನಮ್ಮ ವಿದ್ಯಾರ್ಥಿಗಳಲ್ಲಿ ಅಶಾಂತಿಯು ಹೆಚ್ಚುತ್ತಿರುವುದಕ್ಕೆ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತಿಗೆ ಗಮನಕೊಡದಿರುವುದು ಒಂದು ಕಾರಣ ಎಂದು ವಾರ್ಷಿಕೋತ್ಸವದ ಭಾಷಣದಲ್ಲಿ ಹೇಳಿದುದು ಎಷ್ಟು ಸತ್ಯ !

ಸಂಸ್ಕೃತಿಯೆಂಬುದು ಸಾತ್ವಿಕ ಜೀವನ ವಿಧಾನ. ಅದು ಜನ ಜೀವನದ ಸಮಸ್ತ ಕ್ಷೇತ್ರಗಳಿಗೂ ಶುಚಿತ್ವವನ್ನು ಕೊಟ್ಟು ಮಾನವನ ಘನತೆಯನ್ನು ಹೆಚ್ಚಿಸಿ ಅವನನ್ನು ತೇಜಸ್ವಿಯನ್ನಾಗಿ ಮಾಡುವುದು.

ಹಿಮಾಲಯದಿಂದ ರಾಮೇಶ್ವರದವರೆಗಿರುವ ಭಾರತದಲ್ಲಿ ನಾವು ಕಾಣುವುದು ಒಂದೇ ಒಂದು. ದಿವ್ಯ ಭವ್ಯ ಸಂಸ್ಕೃತಿಯನ್ನು, ಆದ್ದರಿಂದ ಮುಂದಿನ ಸಂಚಿಕೆಗಳಲ್ಲಿ ಭಾರತಕ್ಕೆ ಸಂಬಂಧಿಸಿ ಕರ್ನಾಟಕದಲ್ಲಿ ಬೆಳೆದ ಸಾಂಸ್ಕೃತಿಕ ಪರಂಪರೆ ಯಾವುದು ಎಂಬುದನ್ನು ಸಂಕ್ಷೇಪ್ತವಾಗಿ ವಿವರಿಸುವ ಪ್ರಯತ್ನವಿದೆ. ಭಾರತದ ಸತ್ವಪೂರ್ಣವಾದ ಭಾಗವೆಂಬುದಾಗಿ ಕರ್ನಾಟಕದ ವೈಶಿಷ್ಟ್ಯವನ್ನು ರಾಜಕೀಯ, ಸಾಮಾಜಿಕ ಧಾರ್ಮಿಕ ಹಾಗೂ ಸೌಂದರ್ಯೋಪಾಸಕ ಕಲೆಗಳ ಮೂಲಕ ಅದರ ಸಾಂಸ್ಕೃತಿಕ ಪರಂಪರೆಯನ್ನು ವೀಕ್ಷಿಸೋಣ.

-- *ಸುಮಾದ್ವಾರಕಾನಾಥ್*

# IMPECCABLE WAYS OF GOD

As a person was walking along a road, he saw a slender pumpkin creeper. He thought, "How cruel God must be to burden this slender creeper with a massive fruit?" he walked on, came to a massive margosa tree. Beholding its tiny fruit, he felt, "Indeed, God must be mad. He has given this big tree such a small fruit." Hardly had he finished contemplating thus, when a fruit fell on his eyelid. Being tiny, it caused him only slight pain, immediately, he realised, "I blamed God without adequate thought. Had God burdened this tree with a massive pumpkin. What would have been my fate? It is only because of his giving this tree a small fruit and the slender pumpkin creeper a large fruit that I was able to escape with a minor injury."

There was a king. He has a very pious minister who constantly held, "Whatever Ishwara wills is for our good." One day, the king severed a finger of his and was in agony. He summoned his minister and asked him "do you say this also is for my good?" the minister answered in the affirmative. Enraged, the ruler had the minister thrown in to goal.

On the next day, the king went on a hunt. He got separated from his retinue and lost his way in the forest. Some fierce tribals who desired to sacrifice a human to a deity they worshipped saw the king and captured him. They took him to their priest. The priest examined the ruler and remarked, "This man is unfit to be sacrificed. He has a missing finger and we can immolate only one who is whole." The king was left free. He returned to his place, thankful to be alive. It dawned on him that he had unfairly punished his minister, but for his losing his finger, which, his minister had regarded as being in his interests, he would have perished. He released his minister from jail and apologized. His curiosity a bit aroused, the king asked him, "Do you hold that your being imprisoned was also ordained for your good by God?" "Yes", replied the minister. "Had I not been imprisoned, I would have been at your side in the forest and would have been sacrificed."

As one analyses with faith, one will realize that what God has created is flawless and whatever he ordains is for one's good.

# GOLDEN RULES FOR HAPPINESS

1. Give people more than they expect and do it cheerfully.
2. Memorise your favourite poem.
3. When you say, "I love you" mean it.
4. When you say, "I'm sorry'' look the person in the eye.
5. Never laugh at anyone's dreams. People who don't have much.
6. In disagreements, fight fairly. No name calling.
7. Don't judge people by their relatives or by the life they were born into.
8. Teach yourself to speak slowly but think quickly.
9. When someone asks you a question you don't want to answer, smile and ask, "Why do you want to know?"
10. Take into account that great love and great achievements involve great risk.
11. When you lose, don't lose the lesson.
12. Follow the three R's: Respect for self, Respect for others, Responsibility for all your actions.
13. Don't let a little dispute injure a great friendship.
14. When you realise you have made a mistake, take immediate steps to correct it.
15. Smile when picking up the phone. The caller will hear it in your voice.
16. Marry a person you love to talk to. As you get older, his/her conversational skills will be even more important.
17. Spend some time alone.
18. Open your arms to change, but don't let go of your values.
19. Remember that silence is sometimes the best answer.
20. Read more books, Television is no substitute.
21. Live a good, honourable life. Then when you get older and think back, you will be able to enjoy it a second time.
22. A loving atmosphere in your home is the foundation for your life. Do all you can to create a tranquil harmonious home.
23. In disagreements with loved ones, deal only with the current situation. Don't bring up the past.
24. Don't just listen to what someone is saying. Listen to why they are saying it.
25. Share your knowledge. It's a way to achieve immortality.
26. Be gentle with the earth.
27. Pray. There's immeasurable power in it.
28. Never interrupt when you are being faltered.
29. Mind your own business.
30. Once a year, go someplace you have never been before.
31. If you make a lot of money, put it to use helping others while you are living. It is wealth's greatest satisfaction.
32. Remember that not getting what you want is sometimes a wonderful stroke of luck.
33. Judge your success by what you had to give up in order to get it.
34. Live with the knowledge that your character is your destiny.

# ಊಹಾ ಶಕ್ತಿ

✍ ಪ್ರಸಾದ್

ಅನೇಕ ಸಲ ನಾವು ಮುಂದೆ ಹೀಗಾಗಬಹುದು ಎಂದು ಊಹಿಸಿಕೊಳ್ಳುತ್ತೇವೆ. ಎಷ್ಟೋ ಸಲ ಈ ಊಹೆಗಳು ನಿಜವಾಗುತ್ತವೆ. ಮತ್ತೆಷ್ಟೋ ಸಲ ನಮ್ಮ ಕಲ್ಪನೆಗೂ ಮುಂದೆ ಆಗುವ ಘಟನೆಗಳಿಗೂ ಬಹಳ ಅಂತರವಿರುತ್ತದೆ. ನಾವು ಈ ವಿಷಯಕ್ಕೆ ಹೆಚ್ಚು ಮಹತ್ವ ಕೊಡದೆ ಮರೆತು ಬಿಡುತ್ತೇವೆ. ಮನುಷ್ಯನಿಗೆ ಮುಂದಾಗುವ ಘಟನೆಗಳನ್ನು ಊಹಿಸುವ ಶಕ್ತಿಯೋ ಅಥವಾ ಸಾಧ್ಯತೆಯೋ ಇದೆಯೇ ಅಥವಾ ಇವೆಲ್ಲಾ ಬರೀ ಕಾಕತಾಳ ನ್ಯಾಯವೇ? Intution ಅಥವಾ ಒಳದೃಷ್ಟಿ ನಮಗೆ ಎಷ್ಟೋ ಬಾರಿ ಮುಂದೆ ಹೀಗಾಗಬಹುದು ಎಂಬುದರ ಸೂಚನೆ ಕೊಡುತ್ತದೆ. ಈ ಶಕ್ತಿ ಎಲ್ಲರಲ್ಲೂ ಇದೆಯೇ? ಅಥವಾ ಕೇವಲ ಕೆಲವರಿಗೆ ಸೀಮಿತವಾದದ್ದೇ? ಇದು ಎಲ್ಲರಲ್ಲೂ ಇದ್ದ ಪಕ್ಷದಲ್ಲಿ, ಇದನ್ನು ಬೆಳೆಸಿಕೊಂಡು, ಇದರಿಂದ ಪ್ರಯೋಜನ ಪಡೆಯಬಹುದೇ? ಇವು ಮನೋ ವೈಜ್ಞಾನಿಗಳು ಸಂಶೋಧಿಸುತ್ತಿರುವ ಕೆಲವು ಪ್ರಶ್ನೆಗಳು.

1936ರಲ್ಲಿ ಎರಡು ವಿಭಿನ್ನ ತಂಡಗಳು ಈ ವಿಷಯದಲ್ಲಿ ಒಂದು ಪ್ರಯೋಗವನ್ನು ನಡೆಸಿದವು. ಒಂದು ತಂಡ ಕೇಂಬ್ರಿಜ್‌ನ MITನಲ್ಲಿ ಮತ್ತು ಇನ್ನೊಂದು ತಂಡ ನ್ಯೂಜರ್ಸಿಯ ಪ್ರಿನ್ಸ್‌ಟನ್‌ನಲ್ಲಿ ಪ್ರತ್ಯೇಕವಾಗಿ ಈ ಪ್ರಯೋಗವನ್ನು ನಡೆಸಿದರು. ಎರಡು ತಂಡಗಳಲ್ಲೂ ಭಾಗವಹಿಸಿದವರನ್ನು Adolf Hitler ನ ಭವಿಷ್ಯದ ದಿನಗಳ ಬಗ್ಗೆ ಕೇಳಲಾಯಿತು. ಎರಡು ತಂಡದವರೂ , ''ಇನ್ನೂ 3-4 ವರ್ಷಗಳ ಅವಧಿಯಲ್ಲಿ ಜರ್ಮನಿಯು ಯುದ್ಧದಲ್ಲಿ ತೊಡಗುವುದೆಂದೂ ಆಗ ಫ್ರಾನ್ಸ್, ಬ್ರಿಟನ್, ರಷ್ಯಾ ಮತ್ತು ಪೋಲೇಂಡಿನೊಂದಿಗೆ ಮೊದಲು ಯಾವ ಪಕ್ಷವೂ ಸೇರದೆ ಅಮೇರಿಕಾ ಸೇರಿಕೊಳ್ಳುವುದೆಂದೂ, ಕೊನೆಗೆ ಜರ್ಮನಿಯು ಯುದ್ಧದಲ್ಲಿ ಸೋಲುವುದೆಂದೂ'' ಹೇಳಿದರು. ನಂತರದ ದಿನಗಳಲ್ಲಿ ಅದು ನಿಜವಾದದ್ದು ಎಲ್ಲರಿಗೂ ತಿಳಿದ ವಿಷಯ. ಈ ಎರಡು ತಂಡಗಳಲ್ಲಿಯೂ ಶೇ 64ರಿಂದ 100ವರೆಗೆ ಸರಿಯಾಗಿ ಮುಂದಾಗುವುದನ್ನು ಊಹಿಸಿದ್ದುದು ಆಶ್ಚರ್ಯಕರ.

ಇದೇ ರೀತಿ 1953ರಲ್ಲಿ ಒಬ್ಬ ಶಿಕ್ಷಕರು ತಮ್ಮ 5ನೆಯ ತರಗತಿ ಮಕ್ಕಳನ್ನು ಅಂದಿನಿಂದ 25 ವರ್ಷಗಳ ನಂತರ ಇರುವ ಸ್ಥಿತಿಗತಿಗಳನ್ನು ಊಹಿಸಿಕೊಂಡ ಬರೆಯಹೇಳಿದರು. ಅವರ ಬರಹಗಳನ್ನು ಲಕೋಟೆಗಳಲ್ಲಿ ಭದ್ರಪಡಿಸಿ ಇಡಲಾಯಿತು. 25 ವರ್ಷಗಳ ನಂತರ ಅವನ್ನು ತೆರೆದು ಓದಿದರೆ, ಅವಲ್ಲಿ ಇದ್ದ ವಿವರಗಳು ಆಶ್ಚರ್ಯಕರವಾಗಿದ್ದವು. ಬೆಲೆಗಳ ಏರಿಕೆಯ ಮಟ್ಟ, ಜೆಟ್ ವಿಮಾನ ಪ್ರಯಾಣ, ಆಧುನಿಕ ಟೆಲಿಫೋನ್ ಮತ್ತು ಕ್ಯಾಮರಾ, ಇತ್ಯಾದಿ ವಿಭಿನ್ನ ವಿಷಯಗಳನ್ನು ಮಕ್ಕಳು ಊಹಿಸಿಕೊಂಡು ಬರೆದಿದ್ದರು.

ಈ ವಿಷಯದಲ್ಲಿ ಸಂಶೋಧನೆ ನಡೆಸುತ್ತಿರುವ ಮನೋ ವಿಜ್ಞಾನಿಗಳು ಮಾನವನಲ್ಲಿ ಈ ರೀತಿಯಾದ ಭವಿಷ್ಯವನ್ನು ಊಹಿಸುವ ಶಕ್ತಿ ಇದೆ ಎನ್ನುತ್ತಾರೆ. ಇದು ವ್ಯೆಯಕ್ತಿಕವಾಗಿ ಇರುವುದಕ್ಕಿಂತ ಸಾಮೂಹಿಕವಾಗಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂದೂ ಹೇಳುತ್ತಾರೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಜ್ಞಾನ ಪಡೆಯಲು ಸಂಶೋಧನೆಗಳು ನಡೆಯುತ್ತಿವೆ. ವಿಷಯ ಜ್ಞಾನ ಮತ್ತು ಬುದ್ಧಿ ಶಕ್ತಿಯೊಂದಿಗೆ Intution ಅಥವಾ ಒಳನೋಟ /ಒಳದನಿಯು ಮಹತ್ವದ ಪಾತ್ರ ವಹಿಸುತ್ತದೆ. ಈ ಒಳ ದೃಷ್ಟಿಯು ಮಾನವನಿಗೆ ಪ್ರಕೃತಿ ಇತ್ತ ಒಂದು ಕೊಡುಗೆಯೆನ್ನಬಹುದು. ಮುಂದಾಗುವುದನ್ನು ಊಹಿಸುವುದರಲ್ಲಿ ಕೆಲವು ಅಂಶಗಳನ್ನು ಸಂಶೋಧಕರು ಗುರುತಿಸಿದ್ದಾರೆ. ಅವು ಈ ರೀತಿ ಇವೆ

● ಮುಂದೆ ತೋರಬಹುದಾದ ಲಕ್ಷಣಗಳ ಊಹೆ - Projecting Trends. ಇದನ್ನು ನಮ್ಮ ದಿನ ಜೀವನದಲ್ಲಿ ಮಾಡುತ್ತೇವೆ. ನಮ್ಮಲ್ಲಿರುವ ಸಮಾಚಾರ ಮತ್ತು ಜ್ಞಾನವನ್ನು ಉಪಯೋಗಿಸಿ ಕೊಂಡು ಮುಂದೆ ಆಗಬಹುದಾದಂತಹ ಘಟನೆಗಳನ್ನು ಊಹಿಸುತ್ತೇವೆ. ಉದಾ: ಆಫೀಸಿನಿಂದ ಹೊರಟಾಗ ಮನೆ ಸೇರುವುದಕ್ಕೆ ಎಷ್ಟು ಸಮಯವಾಗಬಹುದೆಂಬ ಊಹೆ. ಇದರಲ್ಲಿ ಬಸ್ ಅಥವಾ ಟ್ರೈನ್ ಪ್ರಯಾಣಕ್ಕೆ ಬೇಕಾದ ಸಮಯ, ಮತ್ತು ಬಸ್‌ಸ್ಟಾಪ್ / ಸ್ಟೇಷನ್ನಿಂದ ಮನೆ ತಲಪಲುಬೇಕಾದ ಸಮಯ ಇತ್ಯಾದಿ ವಿಷಯಗಳನ್ನು ನಾವು ಲೆಕ್ಕ ತೆಗೆದುಕೊಳ್ಳುತ್ತೇವೆ. ಇದೇ ರೀತಿಕ್ಕೆ ಒಂದು ವಸ್ತುವನ್ನು ಮಾರಾಟ ಮಾಡುವವ, ಮುಂಬರುವ ತಿಂಗಳಲ್ಲಿ ತನಗೆ ಆಗಬಹುದಾದ ವ್ಯಾಪಾರದ ಬಗ್ಗೆ ಮಾಡುವ ಅಂದಾಜು. ಇದರಲ್ಲಿ ತಿಂಗಳಿಗೆ ಆಗುವ ಸರಾಸರಿ ವ್ಯಾಪಾರ, ಕಾಲದ ಏರಿಳಿತ, ಮಾರುಕಟ್ಟೆಯ ತೀವ್ರತೆ / ಮಂದಗತಿ, ಇತ್ಯಾದಿಗಳನ್ನು ಅವನು ಪರಿಗಣಿಸಿರುತ್ತಾನೆ. ಈ ಅಂದಾಜುಗಳಲ್ಲಿ ಇನ್ನಾವುದೇ ಕಾರಣಕ್ಕಾಗಿ ಬದಲಾವಣೆಗಳು ಆಗಬಹುದೆಂದಿದ್ದರೆ ಅವನ್ನು ನಾವು ಪರಿಗಣಿಸುತ್ತೇವೆ.

● ಮಾದರಿಯ ತಯಾರಿಕೆ - Model Making:

ಮಾದರಿಯ ತಯಾರಿಕೆ ನಮ್ಮ ಒಳದನಿ/ ಒಳನೋಟಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಇಲ್ಲಿ ಮುಂದಾಗಬಹುದಾದ ಸನ್ನಿವೇಶದ ವಿವಿಧ ಮುಖಗಳನ್ನು ಪರೀಕ್ಷಿಸುವ ಅವಕಾಶ ಸಿಗುತ್ತದೆ. ಇದರಿಂದ ನಾವು ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.

● ಸಾಮೂಹಿಕ ಊಹೆ - Group prophecy

ವೈಯಕ್ತಿಕ ಊಹೆಗಿಂತ ಸಾಮೂಹಿಕ ಊಹೆಯು ಹೆಚ್ಚು ಪರಿಣಾಮ ಕಾರಿಯೆಂದು ತಿಳಿದು ಬಂದಿದೆ. ಇದರ ಬಳಕೆಯನ್ನು ನಾವು Group discussions, Brain Storming ಇತ್ಯಾದಿಗಳಲ್ಲಿ ಮಾಡುತ್ತೇವೆ. 2ನೆಯ ಮಹಾ ಯುದ್ಧದ ನಂತರ ಇದನ್ನು ಬಳಸಿಕೊಂಡ ಒಂದು ರೀತಿಯೆಂದರೆ 'ಡೆಲ್ಫಿ ಟೆಕ್ನಿಕ್' (Delphi Technique) ಇದರಲ್ಲಿ ವಿಷಯದ ಬಗ್ಗೆ ತಜ್ಞರನ್ನು ಮೊದಲು ಪ್ರತ್ಯೇಕವಾಗಿ ಮುಂದಾಗು ವುದನ್ನು ಊಹಿಸಲು ಹೇಳುತ್ತಾರೆ. ನಂತರ ಎಲ್ಲರನ್ನು ಒಟ್ಟುಗೂಡಿಸಿ ಸಾಮೂಹಿಕವಾಗಿ ಮುಂದಾಗುವುದನ್ನು ಊಹಿಸಲು ಹೇಳುತ್ತಾರೆ. ಸಾಮೂಹಿಕ ಊಹೆಯು ಬಹಳ ಪರಿಣಾಮ ಕಾರಿಯಾಗಿರುತ್ತದೆ. ಸಾಮೂಹಿಕ ಊಹೆಯು ಸರಿ ಯಾಗಿರಲು ಏನು ಕಾರಣ ಎಂಬುದು ಸ್ಪಷ್ಟವಾಗಿಲ್ಲ. ತಜ್ಞರು ಇದಕ್ಕೆ ಒಳ ದೃಷ್ಟಿಯ ಮಹತ್ವವೇ ಕಾರಣ ಎಂದು ಅಭಿಪ್ರಾಯ ಪಡುತ್ತಾರೆ. ವಿಷಯವನ್ನು ಸಾಮೂಹಿಕವಾಗಿ ಚರ್ಚಿಸಿದಾಗ ವ್ಯೆಯಕ್ತಿಕವಾದ ಊಹೆಗಳಲ್ಲಿ ಇರುವ ಇತಿಮಿತಿಗಳು ಬದಲಾಗಿ, ಸರ್ವ ಸಮಂಜಸವಾದ ಒಂದು ಸಾಮೂಹಿಕ ಊಹೆಯು ಉಂಟಾಗುತ್ತದೆ.

ಮುಂದಾಗಬಹುದಾದದ್ದನ್ನು ಊಹಿಸಲು ಎರಡು ಅಂಶಗಳು ಮುಖ್ಯ. ಒಂದು - ಶೇಖರಿಸಿದ ಸಮಾಚಾರ, ಜ್ಞಾನ ಇತ್ಯಾದಿಗಳನ್ನು ಪರಿಶೀಲಿಸಿ, ತರ್ಕಬದ್ಧವಾದ ರೀತಿಯಲ್ಲಿ ಮುಂದಾಗುವುದನ್ನು ಅಂದಾಜು ಮಾಡುವುದು. ಇದಕ್ಕೆ ಮನುಷ್ಯನ ಮೆದಳಿನ ಎಡಭಾಗವನ್ನು ಉಪಯೋಗಿಸ ಲಾಗುವುದು. ಇದು ನ್ಯಾಯವಾದ, ತರ್ಕಬದ್ಧವಾದ ವಿಷಯಗಳನ್ನು ಚಿಂತಿಸಲು ಸಹಾಯಕಾರಿ. ಮತ್ತೊಂದು ಒಳದನಿಗೆ ಕಿವಿಗೊಟ್ಟು ಒಳದ ದೃಷ್ಟಿಯಿಂದ ಮುಂದಾಗುವುದನ್ನು ಅಂದಾಜು ಮಾಡುವುದು. ಇದು ತರ್ಕ ಬದ್ಧತೆಗೆ, ಶೇಖರಿಸಿದ

ಸಮಾಚಾರ, ಜ್ಞಾನಗಳಿಗೆ ಸೀಮಿತವಾದದಲ್ಲ'' ಇದಕ್ಕೆ ಮನುಷ್ಯನ ಮೆದುಳಿನ ಬಲಭಾಗವನ್ನು ಉಪಯೋಗಿಸಲಾಗುವುದು. ಇದು ತರ್ಕಬದ್ಧ ವಿಷಯಗಳನ್ನೂ ಮೀರಿ ಚಿಂತಿಸುವ ಶಕ್ತಿಯನ್ನು ಅಂದಿದೆ.

ಈ ಎರಡು ಅಂಶಗಳೂ ಸರಿ ಸೇರಿದರೇನೇ ನಮ್ಮ ಊಹೆ ಸರಿಯಾಗುವುದು.

ಈ ಶಕ್ತಿಯನ್ನು ನಾವು ಬೆಳೆಸಿಕೊಳ್ಳಬಹುದೇ? ತಜ್ಞರು ಇದನ್ನು ನಾವು ಬೆಳೆಸಿಕೊಳ್ಳಬಹುದು ಎನ್ನುತ್ತಾರೆ. ಇದನ್ನು ಬೆಳೆಸಿಕೊಳ್ಳಲು ಅವರು ಹೇಳುವ ವಿಧಾನ :

- ನಾವು ದಿನ ಜೀವನದಲ್ಲಿ ಬಳಸುವ, ಮುಂದಾಗುವ ಘಟನೆಗಳ ಊಹೆಗಳನ್ನು ವಿವರವಾಗಿ ಪರೀಕ್ಷಿಸುವುದು. ಇದರಿಂದ ಅವುಗಳಲ್ಲಿ ಯಶಸ್ವಿಯಾಗಲು ಕಾರಣವಾದ ಅಂಶಗಳ ಮೇಲೆ ನಿಯಂತ್ರಣವನ್ನು ತಂದುಕೊಳ್ಳುವುದು. ಈ ರೀತಿಯ ಅಭ್ಯಾಸದಿಂದ ಈ ಶಕ್ತಿಯು ಬೆಳೆಯುತ್ತದೆ.
- ಮುಂದಾಗುವುದನ್ನು ಊಹಿಸಬೇಕಾದಾಗ, ನಮ್ಮಲ್ಲಿರುವ ಎಲ್ಲಾ ಸಾಧನಗಳನ್ನೂ ಬಳಸುವುದು. ಮೊದಲು ನಮಗೆ ತಿಳಿದ ಸಮಾಚಾರಗಳು, ವಿವರಗಳು ಎಲ್ಲವನ್ನೂ ಬರೆಯುವುದು. ನಂತರ ಇತರರ ಸಲಹೆಗಳನ್ನು ಪಡೆಯುವುದು. ವಿಷಯವನ್ನು ಸಂಗ್ರಹಿಸಿ, ಸಾಮೂಹಿಕ ಸಮ್ಮತವಿರುವ ಇತರರ ಸಲಹೆಗಳನನ್ನು ಪಡೆದ ನಂತರ, ಶಾಂತಿಯಿಂದ ವಿಷಯದ ಬಗ್ಗೆ ಚಿಂತಿಸುವುದು. ಇದರಲ್ಲಿ ನಮ್ಮ ಮೆದುಳಿನ ಎಡ ಮತ್ತು ಬಲ ಭಾಗಗಳೆರಡನ್ನೂ ಉಪಯೋಗಿಸಬೇಕು. ಅಂದರೆ, ತರ್ಕಬದ್ಧತೆಯೊಂದಿಗೆ, ಒಳದನಿ/ಒಳದೃಷ್ಟಿಯನ್ನೂ ಉಪಯೋಗಿಸಬೇಕು. ಮೊದಲು ಒಳದನಿ/ಒಳನೋಟದಲ್ಲಿ ತೋರುವ ಎಲ್ಲಾ ವಿವರಗಳನ್ನೂ ಗುರುತು ಹಾಕಿಕೊಳ್ಳುವುದು. ನಂತರ ವಿಷಯ ಮತ್ತು ಸಲಹೆಗಳನ್ನು ತರ್ಕಬದ್ಧವಾಗಿ ಯೋಚಿಸಿ ಅವನ್ನು ಮತ್ತೊಂದು ಹಾಳೆಯಲ್ಲಿ ಗುರುತು ಹಾಕಿಕೊಳ್ಳುವುದು. ನಂತರ ಎರಡನ್ನು ವಿಮರ್ಶಿಸಿ ನಿರ್ಧಾರಕ್ಕೆ ಬರುವುದು.

ನಮ್ಮ ಈ ಊಹಾ ಶಕ್ತಿಯ ಬಗ್ಗೆ ನಾವು ತಿಳಿದುಕೊಳ್ಳಬೇಕಾದದ್ದು ಇನ್ನೂ ಬಹಳ ಇರಬಹುದು. ಧ್ಯಾನ ಮತ್ತು ಜಪದಿಂದ ಈ ಶಕ್ತಿ ಬೆಳೆಯುತ್ತದೆಂದು ಕೆಲವರು ಹೇಳುತ್ತಾರೆ. ನಮ್ಮ ದಿನ ಜೀವನದಲ್ಲಿ ನಾವು ಇದನ್ನು ಉಪಯೋಗಿಸುತ್ತೇವೆ ಎಂದಾಗ ಅದನ್ನು ಬೆಳೆಸಿಕೊಳ್ಳುವುದು ಒಳ್ಳೆಯದಲ್ಲವೇ?

●

# ಕಾರಂತರು ಮತ್ತು ವಿಜ್ಞಾನ ಹಾಗೂ ಪರಿಸರ

ಡಾ। ವ್ಯಾಸರಾವ್ ನಿಂಜೂರು

''ವಿಷ್ಣುವಿಗೆ ಹತ್ತು ಅವತಾರಗಳಾದರೆ ನನ್ನ ಅವತಾರಗಳು ಹತ್ತು ಹದಿನಾರು'' ಎಂದು ತಮ್ಮ ಆತ್ಮವೃತ್ತದಲ್ಲಿ ಡಾ। ಶಿವರಾಮ ಕಾರಂತರು ಹೇಳಿದ್ದಾರೆ. ಅವರ ಆಸಕ್ತಿಯ ಕ್ಷೇತ್ರಗಳ ಲೆಕ್ಕವಿಡಲುಂಟೇ? ಸೃಜನಶೀಲ ಸಾಹಿತ್ಯ ರಚನೆಯೊಂದನ್ನೇ ಮುಖ್ಯ ಕಾಳಜಿಯಾಗಿ ಇರಿಸಿಕೊಳ್ಳದ ಕಾರಂತರು, ತಮ್ಮ ಸವ್ಯಸಾಚೀ ಪ್ರತಿಭೆಯನ್ನು, ಹೆಚ್ಚುಕಡಿಮೆ ಎಲ್ಲ ಸಾಮಾಜಿಕ ಸ್ತರಗಳತ್ತವೂ ಹರಿಯಬಿಟ್ಟಿದ್ದಾರೆ. ಕಾದಂಬರಿಕಾರರೆಂದೇ ದೇಶದಾದ್ಯಂತ ಗುರುತಿಸಲ್ಪಡುವ ಇವರು ಉತ್ತಮ ನಾಟಕಕಾರರು, ನಟರು, ನಾಡಿನ ಖ್ಯಾತ ಗೀತನಾಟಕಕಾರರಿಬ್ಬರಲ್ಲಿ ಇವರೊಬ್ಬರು. ಯಕ್ಷಗಾನ ತಜ್ಞರು. ಸ್ವಾತಂತ್ರ್ಯ ಹೋರಾಟಗಾರರು. ''ಕಾರಂತರ ಕಾಲಿಗೆ ಚಕ್ರವಿದೆ'' ಎಂದು ಹೇಳಿಸಿಕೊಂಡ ಪರ್ಯಟನಕಾರರು. ಹಳ್ಳಿ ಹಳ್ಳಿಗಳಿಂದ ಹಿಡಿದು ಭೂಖಂಡದ ಹತ್ತು ಹಲವು ದೇಶ ಸುತ್ತಿ ಪ್ರವಾಸ ಕಥನಗಳನ್ನು ಬರೆದು ತಮ್ಮ ಅನುಭವಗಳನ್ನು ದಾಖಲಿಸಿದವರು. ಅಕ್ಷರ ಕಲಿಕೆಯ ಬದಲು ಶಬ್ದ ಕಲಿಕೆಯೇ ಮೇಲು ಎಂದು ನಂಬಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕಾಗಿ ಪಠ್ಯಪುಸ್ತಕಗಳ ಸಾಲು ಸಾಲನ್ನೇ ನಿರ್ಮಿಸಿದವರು. 'ನೋಡಿ ಕಲಿ' ಎನ್ನುವ ಸಿದ್ಧಾಂತಕ್ಕಾಗಿ 'ಬಾಲವನ'ವನ್ನು ರೂಪಿಸಿ ಇನ್ನಿಲ್ಲದ ಬವಣೆ ಅನುಭವಿಸಿದರು. ದೇಶದೇಶದ ವಾಸ್ತುರಚನೆ ಶಿಲ್ಪಗಳ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ಬರೆದವರು, ಭಾರತೀಯ ಹಾಗೂ ಕರ್ನಾಟಕ ಚಿತ್ರಕಲೆಗಳ ಕುರಿತು ದೇಶಭಾಷೆಗಳಲ್ಲಿ ಪ್ರಥಮವೆನಿಸಿವ ಅಧ್ಯಯನಶೀಲ ಹೊತ್ತಗೆ ಬರೆದವರು, ಸ್ವತಃ ಚಿತ್ರಕಾರರು, ಚಲನ ಚಿತ್ರದತ್ತವೂ ಮನ ಹರಿಯ ಬಿಟ್ಟುಸ್ವತಃ ಚಿತ್ರ ನಿರ್ಮಿಸಿದವರು, ನಿಘಂಟುಕಾರರು, ವಿಶ್ವಕೋಶಗಳ ನಿರ್ಮಾಪಕರು, ಮುದ್ರಣ ವ್ಯವಸಾಯಿ, ಹವ್ಯಾಸಿ ಸಂಗೀತಕಾರರು ಹಾಗೂ ನೃತ್ಯಪಟು, ಸೌಂದರ್ಯ ಪ್ರಜ್ಞೆಯನ್ನು ಅರಳಿಸುವ ದೃಷ್ಟಿಯಿಂದ ಯಕ್ಷಗಾನದಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ಮಾಡಿ ಈ ಕಲೆಯನ್ನು ನಾಡಿನ, ದೇಶದ ಹೊರಗೂ ಬಿತ್ತರಿಸಿದವರು, ಸಮಾಜ ಸುಧಾರಣೆಗಾಗಿ ದುಡಿದವರು. ರಾಜಕೀಯದಲ್ಲೂ ಧುಮುಕಿದವರು, ಎಲ್ಲಕ್ಕಿಂತಲೂ ಹೆಚ್ಚಾಗಿ ಬಾಳಸಂಜೆಯಲ್ಲೂ ಚಿಕ್ಕಪುಟ್ಟ ಅನ್ಯಾಯ, ಲೋಪದೋಷಗಳ ಕುರಿತು ಪತ್ರಿಕೆಯ ವಾಚಕರ ವಾಣಿಯಲ್ಲಿ ಬರೆದು ತಮ್ಮ ಸಮಾಜಿಕ ಜವಾಬ್ದಾರಿಯನ್ನು ಶ್ರುತಪಡಿಸಿದ ನಾಗರಿಕರು.

ಇಂತಹ ಬಹುಮುಖ ವ್ಯಕ್ತಿತ್ವದ ಡಾ। ಶಿವರಾಮ ಕಾರಂತರ ಮನೋಪ್ರಪಂಚದಿಂದ ವೈಜ್ಞಾನಿಕ ವಿಷಯಗಳು ಹೊರಗುಳಿಯಲು ಹೇಗೆ ಸಾಧ್ಯ?

ಕಾರಂತರದು ಸದಾ ಕತೂಹಲ ಪ್ರವೃತ್ತಿ. ಕುತೂಹಲ ಮೂಡಿದೊಡನೆ, ಆ ಕುತೂಹಲಕ್ಕೆ ಕಾರಣವಾದ ವಿಷಯಗಳನ್ನು ಸಂಗ್ರಹಿಸಿ, ಓದಿ, ಅಧ್ಯಯನ ಕೈಗೊಂಡು, ಅವುಗಳ ತಲೆಬುಡಗಳನ್ನೆಲ್ಲ ಜಾಲಾಡಿ ಸ್ಪಷ್ಟ ಹಾಗೂ ಸರಳ ಭಾಷೆಯಲ್ಲಿ ಈ ವಿಷಯಗಳನ್ನು ತನ್ನ ಜನರಿಗೆ ತಲುಪಿಸುವುದೇ ಆದ್ಯ ಕರ್ತವ್ಯವೆಂದು ಅವರು ದೃಢವಾಗಿ ನಂಬಿದವರು. ಅದು ಯಕ್ಷಗಾನವೇ ಇರಲಿ, ಪಶುಪಕ್ಷಿಗಳ ಸ್ವಭಾವ ವೈಖರಿಯೇ ಇರಲಿ, ಚಿತ್ರಕಲೆಯೇ ಇರಲಿ, ಈ ಬಗೆಗಿನ ಬರಹಗಳ ಹಿಂದೆ ಆಳವಾದ ಅಧ್ಯಯನದ ಜೊತೆ, ತೀಕ್ಷ್ಣ ಪೃಥಕ್ಕರಣೆ ಹಾಗೂ ಸ್ವಷ್ಟಾತ್ಮಕ ತೀರ್ಮಾನಗಳು ಅಡಕಗೊಂಡಿರುತ್ತವೆ. ಇಲ್ಲಿ ಜಾಳು ಮಾತುಗಳಿಗೆ, ಆಧಾರರಹಿತ ಸಂಗತಿಗಳಿಗೆ ಇಂಬಿಲ್ಲ. ಅನುಭವಗಳು ಕಾರಂತರ ಕಾದಂಬರಿ ಲೋಕಗಳನ್ನು ಸೃಷ್ಟಿಸಿದಂತೆಯೇ, ಅಧ್ಯಯನಗಳು ಕಾರಂತರ ಸೃಜನೇತರ ಕೃತಿಗಳ ನಿರ್ಮಾಣಕ್ಕೆ ಕಾರಣವಾಗಿವೆ. ಈ ಮಾತು ತುಂಬ ಸ್ಪಷ್ಟಗೊಳ್ಳುವುದು ಕಾರತಂರ ವೈಜ್ಞಾನಿಕ ಸಾಹಿತ್ಯದಲ್ಲಿ.

ಡಾ। ಕಾರಂತರು ಕಾಲೇಜು ಶಿಕ್ಷಣ ಮುಗಿಸಿ ಸಾಂಪ್ರದಾಯಿಕವಾಗಿ ವಿಶ್ವವಿದ್ಯಾನಿಲಯದ ಮುದ್ರೆಯುಳ್ಳ ಪದವಿ ಪಡೆದವರಲ್ಲ. ಕ್ಲೀಷೆಯಾಗಿ ಹೇಳಬೇಕಾದರೆ ಜೀವನವೇ ಅವರ ವಿಶ್ವವಿದ್ಯಾಲಯ. ಹೀಗಾಗಿಯೇ ಅವರ ವಿದ್ವತ್ತನ್ನು ಮನ್ನಿಸಿ ದೇಶದ ಏಳೆಂಟು ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿವೆ. ವಿದೇಶದ ವಿಶ್ವವಿದ್ಯಾಲಯಗಳೂ ಡಿ.ಲಿಟ್. ಪದವಿಕೊಟ್ಟಿವೆ. ಹೀಗಿದ್ದೂ ಕಾರಂತರಿಗೆ ವಿಜ್ಞಾನದ ಕುರಿತು ಬರೆಯಲು ಏನು ಅಧಿಕಾರ, ಅವರೇನು ವಿಜ್ಞಾನಿಯೇ ಎನ್ನುವ ಧಿಮಾಕಿನ ಮಾತು ನಮ್ಮ ನಾಡಿನಲ್ಲೇ ಹೇಳಿದವರಿದ್ದಾರೆ. ನಮ್ಮ ಖ್ಯಾತ ವಿಜ್ಞಾನಿಗಳಲ್ಲೊಬ್ಬರು ''ಬರಹಗಾರ ಕಾರಂತರಿಗೆ ಬೇಡದ ಉಸಾಬರಿ ಏಕೆ? ಪರಮಾಣು ವಿಜ್ಞಾನ ಸಾಹಿತಿಗಳಿಗೆ ಅರ್ಥವಾಗದ ಕ್ಲಿಷ್ಟಕ್ಷೇತ್ರ''. ಆದರೆ ಇಂತಹ ಹೇಳಿಕೆಗಳು ಎಷ್ಟು ಹಾಸ್ಯಾಸ್ಪದ ಎನ್ನುವುದು ಕೆಳಗೆ ನಮೂದಿಸಿದ ವಿಷಯಗಳಿಂದ ವ್ಯಕ್ತವಾಗುತ್ತವೆ.

ಭರತನಾಟ್ಯ, ಸಂಗೀತದಂತಹ ಕಲೆಗಳ ಕುರಿತು ಅಧ್ಯಯನ ನಡೆಸಿ ಬರೆಯಬೇಕಾದಲ್ಲಿ ಆತ ನೃತ್ಯಪಟು

ಅಥವಾ ಸಂಗೀತ ಕೋವಿದನಾಗಿರಬೇಕೆ? ಆಗಿದ್ದರೆ ಅಡ್ಡಿಯಿಲ್ಲ. ಒಂದೊಮ್ಮೆ ನಮ್ಮ ನಿಮ್ಮಂತಹ ಸಮಾನ್ಯ ಕಲಾಸಕ್ತರು ಓದಿ ವಿಷಯಗ್ರಹಣ ಮಾಡಿ ಈ ಕುರಿತು ಬರೆಯಕೂಡದು ಎನ್ನುವ ಕಾನೂನು ಇದೆಯೇ?

ವಾಟ್ಸನ್ ಮತ್ತು ಕ್ರಿಕ್ಸ್, ಜಾಕಸ್ ಮನೋಡ್, ಅಲ್ಡಸ್ ಹಕ್ಸ್‌ಲಿ, ಜೆ.ಬಿ.ಎಸ್. ಹಾಲ್ಡೇನ್ ನಂಥವರು ಅತ್ಯುತ್ತಮ ವೈಜ್ಞಾನಿಕ ಸಾಹಿತ್ಯ ನಿರ್ಮಿಸಿದ ವಿಜ್ಞಾನಿಗಳು ನಿಜ. ಆದರೆ ಜಗತ್ತಿನ ಸುಪ್ರಸಿದ್ಧ ಕಲಾಕಾರನಾದ ಲಿಯೋನಾರ್ಡೋ ಡಾ ವಿಂಚಿ ವಿಜ್ಞಾನಿಯೂ ಎಂದೆನಿಸಿ ಪುಸ್ತಕ ಬರೆದುದುಂಟು. ಸ್ವತಃ ವಿಜ್ಞಾನಿಗಳಲ್ಲದ ಆರ್ಥರ್ ಸಿ. ಕ್ಲಾರ್ಕ್, ಎಚ್.ಜಿ.ವೆಲ್ಸ್, ಜಾರ್ಜ ಆರ್‌ವೆಲ್‌ರಂಥವರು ಕಲ್ಪಿಸಿ ಬರೆದ ವೈಜ್ಞಾನಿಕ ಕೃತಿಗಳು ಮುಂದೊಂದು ದಿನ ನಿಜವಾದುದ್ದುಂಟು. ಹಾಗಿದ್ದರೆ ವೈಜ್ಞಾನಿಕ ಸಾಹಿತ್ಯದ ಗುತ್ತಿಗೆಯನ್ನು ವಿಜ್ಞಾನಿಗಳೇ ಪಡೆಯತಕ್ಕದ್ದು ಎನ್ನುವ ವಾದ ಅದೆಷ್ಟು ಹಾಸ್ಯಾಸ್ಪದವಾದದ್ದು !

ಇನ್ನೊಂದು ಕಿವಿಮಾತು. ವೈಜ್ಞಾನಿಕ ಸಂಶೋಧನೆಯ ಅದೆಷ್ಟೋ ಒಳ್ಳೆಯ ಪ್ರಬಂಧಗಳು ಸ್ಪಷ್ಟತೆಯ ಅಭಾವ, ಭಾಷಾದೋಷಗಳು ಹಾಗೂ ಅತಿ ವಾಚಾಳಿತನದಿಂದಾಗಿ ವೈಜ್ಞಾನಿತ ನಿಯತಕಾಲಿಕೆಗಳಿಂದಲೇ ತಿರಸ್ಕರಿಸಲ್ಪಡುತ್ತವೆ. ವಿಜ್ಞಾನಿಯಾಗಿ ಈ ಅನುಭವ ಪಡೆದ ನಾನು ಇದನ್ನು ಯಾವುದೇ ಇರಿಸುಮುರಿಸು ಇಲ್ಲದೆ ಒಪ್ಪಿಕೊಳ್ಳುತ್ತೇನೆ. ಪ್ರಕಾಂಡ ವಿಜ್ಞಾನ ಪಂಡಿತರು ಇದನ್ನು ನಿರಾಕರಿಸಲು ಸಾಧ್ಯವೇ?

ಏನೇ ಇರಲಿ; ಕಾರಂತರ ತೀಕ್ಷ್ಣ ಮತಿತ್ವ, ವೈಚಾರಿಕ ಮನೋಭಾವ, ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳದ ತಾರ್ಕಿಕ ಪ್ರವೃತ್ತಿ, ಸದಾ ಅರಸುವಿಕೆ - ಇವೆಲ್ಲ ಶಿಷ್ಟ ಸಂಪ್ರದಾಯದ ಮೂಲಕ ವಿಜ್ಞಾನಿಯಾಗದ ಅವರನ್ನು ಶ್ರೇಷ್ಠ ವಿಜ್ಞಾನಿಗಳ ಸಾಲಿಗೆ ಸೇರಿಸುವುದಕ್ಕೆ ಸಮಂಜಸ ಅರ್ಹತೆಗಳಾಗಿವೆ. ವಿಜ್ಞಾನಿ ಎಂದೊಡನೆ ಸದಾ ಬಿಳಿ ಮೇಲುಡುಗೆ ತೊಟ್ಟುಕೊಂಡು ಪ್ರಯೋಗಗಳಲ್ಲಿ ನಿರತವಾಗಿರ ಬೇಕಿಲ್ಲ. ಯಾವ ಪ್ರಯೋಗ, ಸಂಶೋಧನೆಗಳನ್ನು ಸ್ವತಃ ಮಾಡಲಾಗದ, ಮಾಡದ ಹಾಕಿಂಗ್ಸ್ ನಂತಹ ಅತಿ ಚಿಂತನಪರ ಸೈದ್ಧಾಂತಿಕ ವಿಜ್ಞಾನಿಗಳ ಸಾಲು ಸಾಲೇ ನಮ್ಮ ಮುಂದಿದೆ. ಜಗತ್ತಿನ ಹುಟ್ಟು, ಸಾವು, ನಮ್ಮ ಸುತ್ತಮುತ್ತಲಿನ ಜನ ಜೀವನ, ಪರಿಸರ, ಕಾಡು, ಮೃಗ, ಪಕ್ಷಿ, ಜಲಜೀವಿಗಳ ಕುರಿತು ಗಾಢವಾಗಿ ಚಿಂತಿಸುತ್ತ ಈ ಕುರಿತು ವಿಸ್ತೃತವಾಗಿ ಓದಿಕೊಂಡು, ಸ್ವತಃ ಕಂಡು ಅನುಭವಿಸಿ ಅಧ್ಯಯನ ನಡೆಸಿ ಒಂದು ವಿಚಿತವಾದ ತೀರ್ಮಾನಕ್ಕೆ ಬರುವ ಡಾ. ಕಾರಂತರು ಯಾವ ಥಿಯರಿಟಿಕಲ್ ಸ್ಸಾಂಟಿಸ್ಟ್‌ಗೂ ಕಡಿಮೆ ಯವರಲ್ಲ.

ವಿಜ್ಞಾನ ಎಂದೊಡನೆ ಕಾರಂತರನ್ನು ದೃಷ್ಟಿಯಲ್ಲಿರಿಸಿಕೊಂಡು ನಮ್ಮ ಮನಸ್ಸಿಗೆ ಬರುವುದು ಅವರು ಸಿದ್ಧಪಡಿಸಿದ ವಿಶ್ವಕೋಶಗಳಾದ 'ಬಾಲ ಪ್ರಪಂಚ' ಹಾಗೂ 'ವಿಜ್ಞಾನ ಪ್ರಪಂಚ' ಬಾಲಪ್ರಪಂಚವೆನ್ನುವ ಎಳೆಯರ ವಿಶ್ವಕೋಶವನ್ನು ಎವರು ಬರೆದದ್ದು ೧೯೩೦ರಲ್ಲಿ. ಅದೂ ೩ ಸಂಪುಟಗಳಲ್ಲಿ ಎಂದರೆ ಯಾರಿಗೂ ಅಚ್ಚರಿಯಾಗಬೇಕು. ನಾವೆಲ್ಲ ಹೆಮ್ಮೆ ಪಡಬೇಕಾದ ವಿಷಯವೆಂದರೆ ಬೇರಾವ ದೇಶ ಭಾಷೆಗಳಲ್ಲೂ ಮಕ್ಕಳಿಗೆ ವೈಜ್ಞಾನಿಕ ಮಾಹಿತಿ ನೀಡುವ ಅತ್ಯಂತ ಸರಳ ಭಾಷೆಯಲ್ಲಿ ಬರೆದ ಇಂತಹ ಹೊತ್ತಗೆಗಳು ಬೇರೆ ಇಲ್ಲವೇ ಇಲ್ಲ.

ಇಂಗ್ಲೀಷ್‌ನಲ್ಲಿ ಸಾಮಾನ್ಯವಾಗಿ ಭಾಷಾ ಜ್ಞಾನವಿದ್ದ ವ್ಯಕ್ತಿಗೆ ತನ್ನ ಜ್ಞಾನತೃಷೆಯನ್ನು ಹಿಂಗಿಸಿಕೊಳ್ಳಲು ಪ್ರತಿಯೊಂದು ವಿಷಯದಲ್ಲೂ ಬರಹವಿದೆ. ಎಳೆಯರ ಸಲುವಾಗಿಯೇ ಬರಹಗಳಿವೆ. ತದ್ವಿರುದ್ಧವಾಗಿ ಕನ್ನಡದಲ್ಲಿ ಪ್ರೌಢ ಓದುಗರೂ, ಓದಿ ಅರಗಿಸಿಕೊಳ್ಳಬಹುದಾದ ಬರಹಗಳು ಏನೇನೂ ಇಲ್ಲವೆಂದು ಮನಗಂಡ ಕಾರಂತರು 'ಬಾಲಪ್ರಪಂಚ' ತಯಾರಿಸಲು ಸನ್ನದ್ಧರಾದರು. ಅವರೇ ಹೇಳುವಂತೆ ''ಕನಸುಗಾರಿಕೆ ನನ್ನ ಶೀಲ, ಬಾಲಪ್ರಪಂಚ ಮಾಡುತ್ತೇನೆಂದುಕೊಂಡೆ. ಕೊನೆಗೆ ಬೇರೆಯವರಿಗೆ ಅಲ್ಲವಾದರೂ, ಅದು ನನಗೇ ಶಿಕ್ಷಣವಾದೀತು. ನಾನು ಓದಿಲ್ಲದ ಹಲವು ವಿಷಯಗಳನ್ನು ಓದಲು ಒಂದು ಸಂದರ್ಭ ಎಂದು ತಿಳಿದುಕೊಂಡೆ''- ಎಂದಿದ್ದಾರವರು.

ಇಂಗ್ಲೀಷ್‌ನಲ್ಲಿ ಆರ್ಥರ್ ಯೂ ಬರೆದ Childrens Encyclopeadia' ಹಾಗೂ ಜಾಜ್ ನ್ಯೂನ್ಸ್ ಕಂಪೆನಿಯವರು ಹೊರಡಿಸಿದ್ದ Pictorial Knowledge ಎಂಬೆರಡು ಗ್ರಂಥ'ಗಳನ್ನು ಮುಖ್ಯಾಧಾರವಾಗಿರಿಸಿಕೊಂಡು, ಇನ್ನೆಷ್ಟೋ ಇಂಥಹ ಮಾದರಿಯ ಹೊತ್ತಗೆಗಳನ್ನು ಅಭ್ಯಾಸ ಮಾಡಿ ಮಕ್ಕಳ ಜ್ಞಾನಕೋಶ ತಯಾರಿಸುವ ಸಿದ್ಧತೆ ನಡೆಸಿದರು. ಕಾರಂತರು. ಇಲ್ಲಿ ನಾವು ಸಾಮಾನ್ಯವಾಗಿ ವಿಜ್ಞಾನವೆಂದು ಪರಿಗಣಿಸುವ ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗೋಳ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಖಗೋಳ ವಿಜ್ಞಾನ ಮಾತ್ರವಲ್ಲದೆ ಅನ್ವಯಿಕ ವಿಜ್ಞಾನಕ್ಕೂ, ಸಮಾಜಶಾಸ್ತ್ರ ನೆಲೆಯಲ್ಲಿ ಬರುವ ರಾಜನೀತಿ, ಧರ್ಮ, ಅರ್ಥಶಾಸ್ತ್ರ ಇವೂ ಅಡಕಗೊಂಡಿವೆ. ಕೊನೆಯವುಗಳನ್ನು ಇತರ ಸಹಾಯವಿಲ್ಲದೇ ಸ್ವತಃ ಅವರೇ ಬರೆದರು. ಆ ಕಾಲದಲ್ಲಿ ಅವರ ಬಳಿ ಮುದ್ರಣ ಸೌಲಭ್ಯ ಇದ್ದಿರಲಿಲ್ಲ. ಬೇರೆ ಕಡೆಯಲ್ಲಿ ಮುದ್ರಿಸಿಕೊಳ್ಳಲು ಹಣದ ಅಡಚಣೆಯೂ ಇದ್ದಿತ್ತು. ಆದರೆ ಮಕ್ಕಳಿಗೆ ಜ್ಞಾನಕೋಶವೊಂದನ್ನು ಸಿದ್ಧಪಡಿಸಿಯೇ ತೀರಬೇಕೆಂಬ ಜಿದ್ದು ಮಾತ್ರ ಇತ್ತು. ಆಕರ ಗ್ರಂಥಗಳನ್ನು ತಾವೇ ಹಣಕೊಟ್ಟು ತರಿಸಿಕೊಂಡರು. ವಿದೇಶದ ಹಲವಾರು ಪ್ರಾಣಿ ಸಂಗ್ರಹಾಲಯಗಳಿಗೆ, ಸರಕಾರಗಳಿಗೆ, ಉದ್ಯಮ ಮಂದಿರಗಳ ಜತೆ ಪತ್ರವಿನಿಮಯ ನಡೆಸಿ ಸಾಕಷ್ಟು ಚಿತ್ರಗಳನ್ನು ಸಾಹಿತ್ಯಗಳನ್ನು ಪಡೆದರು. ಆ ಬಳಿಕ ಚಿತ್ರಗಳಿಗಾಗಿ ಭಾರತವಿಡೀ ಸಂಚಾರ ಕೈಗೊಂಡು ಸುಮಾರು ೩೦೦ ಫೋಟೋಗಳನ್ನು ತನ್ನ ಕ್ಯಾಮರಾದಿಂದಲೇ ಸೆರೆಹಿಡಿದು ಸಂಗ್ರಹಿಸಿದರು. ಹೀಗೆ ೬೦೦ ಪುಟಗಳ ಮೂರು ಸಂಪುಟಗಳ ಬಾಲ ಪ್ರಪಂಚವನ್ನು ಅದೆಷ್ಟೋ ಪರದಾಟಗಳ ಬಳಿಕ ಪ್ರಕಟಿಸಿದರು.

ಬಾಲ ಪ್ರಪಂಚದ ವಿಷಯ ವೈವಿಧ್ಯವನ್ನು ನಿರೂಪಿಸುವುದಾಗಲಿ, ಅದರ ವಿಮರ್ಶೆ ಮಾಡುವುದಾಗಲಿ ಖಂಡಿತ ಈ ಪ್ರಬಂಧದ ಉದ್ದೇಶವಲ್ಲ, ಇಂತಹ ಬೃಹತ್ ಕೆಲಸವೊಂದನ್ನು ವಿಜ್ಞಾನಿಯಲ್ಲದ ಒಬ್ಬ ವ್ಯಕ್ತಿ ಹೇಗೆ ಮಾಡಿದರು ಎನ್ನುವ ಕಿರು ಪರಿಚಯ ಇಲ್ಲಿ ನೀಡಲಾಗಿದೆ. ಬಾಲ ಪ್ರಪಂಚದ ಕುರಿತು ತಾತ್ಪರ್ಯವಾಗಿ ಕಾರಂತರೇ ಹೀಗೆ ಹೇಳಿದ್ದಾರೆ ''ಒಬ್ಬನಿಗೆ ಒಂದು ಭಾಷೆಯ ಜ್ಞಾನವಿದ್ದ ಮಾತ್ರಕ್ಕೆ ಆತ ಆ ಭಾಷೆಯ ಯಾವ ಪುಸ್ತಕವನ್ನೂ ತಿಳಿಯಬಹುದು - ಎಂದು ಎಣಿಸಬಾರದು. ವಿಷಯ ಪ್ರವೇಶ ಮಾಡುವಾಗ, ಅದರ ಸ್ಥೂಲ ಜ್ಞಾನ ದೊರಕಿಸಿಕೊಳ್ಳುವುದು ಕಠಿಣವೇ. ಇಂಗ್ಲೀಷ್‌ನಲ್ಲಿರುವ Childrens' Encyclopaedia ಮಕ್ಕಳಿಗಾಗಿ ಬರೆದಿದ್ದರೂ, ಒಮ್ಮೆಗೆ ಅದನ್ನು ಓದಿ ತಿಳಿಯುವಷ್ಟು ಸುಲಭವಾಗಿಲ್ಲ. ಕತೆಗಳನ್ನು ಓದುವಷ್ಟು ಸುಲಭ, ವಿಜ್ಞಾನ ವಿಚಾರವಲ್ಲ. ಜ್ಞಾನ ಪರಿಚಯಕ್ಕೆ ತತ್ಸಂಬಂಧ ಪಾರಿಭಾಷಿಕ ಸಬ್ದಗಳ ನೆರವೂ ಬೇಕಾಗುತ್ತದೆ. ಒಂದಕ್ಕೊಂದು ಹೊಂದಿದ ಇತರ ವಿಷಯಗಳ ತಿಳಿವೂಬೇಕು. ಹೀಗಿರುತ್ತ ಕನ್ನಡ ಬಲ್ಲ ಪ್ರಾಥಮಿಕ ಶಾಲೆಯ ಹುಡುಗ, ಬಾಲಪ್ರಪಂಚವನ್ನು ಓದಿ ತಿಳಿದಾನು ಎನ್ನುವ ಮಾತಿಲ್ಲ. ವಿಷಯಗಳನ್ನು ತಿಳಿಯಲು ಬಯಸುವವನಿಗೆ, ಕನ್ನಡದಲ್ಲಿ ಯಾವ ಗ್ರಂಥವೂ ಇಲ್ಲದಿರುವ ವೇಳೆ, ಅವುಗಳ ಸ್ಥೂಲ ಪರಿಚಯವನ್ನು ನನ್ನೀ ಬರಹ ಮಾಡಿಕೊಡಲು ಪ್ರಯತ್ನಿಸುತ್ತದೆ. ಮಕ್ಕಳು ಅದರ ವಿವರಗಳಿಂದ ಮತ್ತು ಚಿತ್ರಗಳಿಂದ ತಿಳಿಯಬಹುದಾದ ನೂರಾರು

ಸಂಗತಿಗಳನ್ನು ಬಾಲ ಪ್ರಪಂಚದಲ್ಲಿ ಕೊಟ್ಟಿದೆ. ಅದು ಜ್ಞಾನ ಬಾಲ್ಯ; ಪ್ರೌಢಿಮೆಯಲ್ಲ. ಅದು ವಿಷಯಗಳ ಪ್ರವೇಶಕ್ಕೆ ಮಾತ್ರ ಸಹಾಯ. ಆ ದೃಷ್ಟಿಯಿಂದ ಅದು ಬಾಲಪ್ರಪಂಚ''

''ವಿಜ್ಞಾನ ಪ್ರಪಂಚ''- ಎಂದು ನಾಲ್ಕು ಸಂಪುಟಗಳಲ್ಲಿ ಡಾ. ಕಾರಂತರು ಪ್ರಕಟಿಸಿದ ಕೃತಿಗಳ ಹಿಂದಿನ ಸಾಧನೆ ಊಹೆಗೆ ನಿಲುಕದ್ದು. ಭಾಷೆಯ ದೃಷ್ಟಿಯಿಂದ ಪಾರಿಭಾಷಿಕ ಶಬ್ದಗಳನ್ನು ಟಂಕಿಸುವ ದೃಷ್ಟಿಯಿಂದ ವಿಷಯ ಹಾಗೂ ಅವುಗಳಿಗೆ ಪೂರಕವಾದ ಚಿತ್ರ ಹಾಗೂ ರೇಖಾ ಚಿತ್ರಗಳ ದೃಷ್ಟಿಯಿಂದ ಈ ಕೆಲಸ ದೈತ್ಯ ಮಟ್ಟದ್ದು, ವಿಜ್ಞಾನ ಪ್ರಪಂಚದ ಸಾಹಸ ಬಾಲಪ್ರಪಂಚವನ್ನು ಮೀರಿಸಿದ ಕೆಲಸ ಅದಕ್ಕಾಗಿ ಎಷ್ಟು ಓದಿದರೂ ಕಡಿಮೆಯೇ. ಸ್ವತಃ ಕಾರಂತರು ಹೇಳುವಂತೆ ''ಅರ್ಥವಾಗದ ವಿಷಯಗಳನ್ನು ಬಲ್ಲವರಿಂದ ಕೇಳಿ, ಕಲಿತು ಬರೆದೆ. ಆ ಗ್ರಂಥ ಬರೆಯುವ ಕಾಲದೊಳಗೇ ಅನೇಕ ವೈಜ್ಞಾನಿಕ ಕಲ್ಪನೆಗಳು ಬದಲಾದುದುಂಟು. ಬರೆದು ಅಚ್ಚಿಗೆ ಹೋದುದನ್ನು ಅಚ್ಚಾಗಿ, ಬರುವುದರೊಳಗಾಗಿ ತಿದ್ದಬೇಕಾಗಿಯೂ ಬಂತು.''

ಈ ಜಗತ್ತು, ವಸ್ತು ಚೈತನ್ಯ, ಜೀವ ಜೀವನ ಹಾಗೂ ಅನ್ವಯಿಕ ವಿಜ್ಞಾನಗಳಾದ ವೈದ್ಯಶಾಸ್ತ್ರ, ಆರೋಗ್ಯ ಇತ್ಯಾದಿ ಒಳಗೊಂಡ ನಾಲ್ಕು ಸಂಪುಟಗಳ ಗಾತ್ರ ೧೯೯೬ ಪುಟಗಳು ೧೯೫೯, ೬೦, ೬೨ ಹಾಗೂ ೬೪ರಲ್ಲಿ ಈ ಸಂಪುಟಗಳು ಪ್ರಕಟವಾದುವು.

ಈ ಬೃಹತ್ ಗಾತ್ರದ, ವ್ಯಕ್ತಿಯೊಬ್ಬನಿಗೆ ತೀರಕಷ್ಟ ಸಾಧ್ಯವಾದ ವಿಶ್ವಕೋಶವನ್ನು ರಚಿಸುವ ಅಗತ್ಯವೇನಿತ್ತು ಎಂಬುದಕ್ಕೆ ಕಾರಂತರೇ ಹೀಗೆ ಉತ್ತರಿಸುತ್ತಾರೆ. ''ನನ್ನ ಉದ್ದೇಶ, ಜನಗಳಲ್ಲಿ ಆಧುನಿಕ ವಿಜ್ಞಾನವನ್ನು ಕುರಿತು ಅಭಿರುಚಿ ಹುಟ್ಟಿಸಬೇಕು ಎಂದು. ಆ ಕಾರಣದಿಂದಲೇ ನಾನು ಈ ಕಾರ್ಯವನ್ನು ತೊಡಗಿದ್ದು, ನನಗೆ ತಿಳಿದಂತೆ, ನನ್ನ ಶಕ್ತಿಯ ಪರಿಮಿತಿಯಲ್ಲಿ ೧೬-೧೮ ವರ್ಷ ಪ್ರಾಯದ ತರುಣರಿಗಾಗಿಯೂ, ವಯಸ್ಕರಿಗಾಗಿಯೂ ನಾನು ಈ ಗ್ರಂಥಗಳನ್ನು ಬರೆದು ಮುಗಿಸಿದೆ. ಇಂದಿನ ವಿಜ್ಞಾನವೆಂಬುದು ದಿನ ದಿನವೂ ಅಭಿವೃದ್ಧಿ ಹೊಂದುತ್ತಿದೆ. ಹೊಸ ಹೊಸ ಸಾಕ್ಷಿಗಳಿಂದ, ಅನೇಕ ಹಳೆಯ ಕಲ್ಪನೆಗಳನ್ನು ಮರೆಯಬೇಕಾಗಿ ಬಂದಿದೆ. ನನ್ನೀ ಗ್ರಂಥವು ಕೆಲಸಕ್ಕೆ ಬರಬೇಕಾದರೆ - ಪ್ರತಿ ೫ ವರ್ಷಗಳಿಗೊಮ್ಮೆ ತಿದ್ದಿದ ಆವೃತ್ತಿಯನ್ನು ಪ್ರಕಟಿಸಬೇಕಾದೀತು''.

ವೈಜ್ಞಾನಿಕ ವಿಶ್ವಕೋಶವೊಂದನ್ನು ರಚಿಸಿ ಸುಮ್ಮನೆ ಕೈ ಚೆಲ್ಲಿ ಕುಳಿತರಾಗದು ಎನ್ನುವ ಎಚ್ಚರ ಕಾರಂತರಿಗೆ ಇರುವುದು ಮಾತ್ರವಲ್ಲದೆ, ಮುಂದೂ ಸಾಧ್ಯವಾದರೆ ಈ ಆವೃತ್ತಿಯನ್ನು ಪರಿಷ್ಕರಿಸಬೇಕೆಂಬ ಮನೋಭಿಲಾಶೆ ಇರುವುದು ಇಲ್ಲಿ ವ್ಯಕ್ತವಾಗುತ್ತದೆ.

ಕಂಡು, ಕುತೂಹಲಗೊಳ್ಳುವುದು, ಪ್ರಶ್ನಿಸುವುದು, ಉತ್ತರದ ಬೆಂಬತ್ತುವುದು ಕಾರಂತರ ಜಾಯಮಾನ. ಅವರ ಓದು ಕೇವಲ ಮನರಂಜನೆಯದಲ್ಲ. ಅರಿವನ್ನು ವಿಸ್ತರಿಸವಂತ ಹುದು. ಎಲ್ಲಾದರೂ ಒಂದು ಹೊಸ ಮಾಹಿತಿ ಸಿಕ್ಕಲ್ಲಿ, ಅದರ ಅದ್ಯಂತವನ್ನು ಹುಡುಕಿ ತೆಗೆದು, ಆ ವಿಷಯಕ್ಕೆ ಸಂಬಂಧಿಸಿದ ಹೊತ್ತಗೆಗಳನ್ನು ಖರೀದಿಸಿ, ಓದಿ ಟಿಪ್ಪಣಿ ಮಾಡಿಕೊಂಡು ಇರಿಸುವ ಪ್ರವೃತ್ತಿಯುಳ್ಳ ಕಾರಂತರು ತಾವು ತಿಳಿದುದನ್ನು ಇತರರೂ ತಿಳಿದುಕೊಳ್ಳಬೇಕೆನ್ನುವ ಆಕಾಂಕ್ಷೆಯಿಂದ, ಸುಲಭ ಗ್ರಾಹ್ಯವಾಗುವಂತೆ ಬರೆದು ಪ್ರಕಟಿಸುತ್ತಾರೆ. ಹೀಗಾಗಿ ಕಾರಂತರ ವೈಜ್ಞಾನಿಕ ಬರಹಗಳು ಅಸಂಖ್ಯ. ''ಪ್ರಾಣಿ ಪ್ರಪಂಚ'' ಹಾಗೂ ''ಹಿರಿಯ ಕಿರಿಯ ಹಕ್ಕಿಗಳು'' - ಮಕ್ಕಳಿಗಾಗಿ ಬರೆದ ಮೋಹಕ ಚಿತ್ರಗಳುಳ್ಳ ಹೊತ್ತಗೆಗಳು. ಇದಲ್ಲದೆ ''ವಿಚಿತ್ರ ಖಗೋಲ'' ''ನಮ್ಮ ಭೂಖಂಡಗಳು'', ''ಪ್ರಾಣಿ ಪ್ರಪಂಚದ ವಿಸ್ಮಯಗಳು'', ''ವಿಶಾಲ ಸಾಗರಗಳು'', ''ಉಷ್ಣವಲಯದ ಅಗ್ನೇಯ'', ''ಮಂಗನ ಕಾಯಿಲೆ'' (ಕ್ಯಾಸನೂರ್ ಫಾರೆಸ್ಟ್ ಡಿಸೀಸ್) ಮುಂತಾದ ಪ್ರಬುದ್ಧ ಹೊತ್ತಗೆಗಳಲ್ಲದೆ ''ಗೃಹ ವಿಜ್ಞಾನ'' ''ಕೋಳಿ ಸಾಕಣೆ''ಯಂತಹ ದಿನಬಳಕೆಯ ಮಾರ್ಗದರ್ಶಿಗಳನ್ನು ಅವರು ಬರೆದು ಸ್ವತಃ ಪ್ರಕಟಿಸಿದ್ದಾರೆ. ೧೯೩೬ರಷ್ಟು ಹಿಂದೆಯೇ 'ಸಾಮಾನ್ಯ ವಿಜ್ಞಾನ' ಭಾಗ ೧, ೨, ೩ ಎನ್ನುವ ಮಾಧ್ಯಮಿಕ ಶಾಲೆಯ ಪಠ್ಯಪುಸ್ತಕ ರಚಿಸಿದ್ದಾರೆ. ಅವರು ಅನುವಾದಿಸಿದ ವಿಜ್ಞಾನ ಸಾಹಿತ್ಯವೂ ಕಡಿಮೆಯದೇನಲ್ಲ. ೧೯೫೬ರಲ್ಲಿ ''ಪರಮಾಣು - ಇಂದು ನಾಳೆ'' ಎನ್ನುವ ಮಾರ್ಗರೆಟ್ ಹೈಡ್‌ರ ಪ್ರಬುದ್ಧ ಹೊತ್ತಗೆಯನ್ನು ಅನುವಾದಿಸಿದ ಕಾರಂತರು ತರ್ಜುಮೆ ಮಾಡಿದ ಇತರ ಪ್ರಮುಖಗ್ರಂಥಗಳು ''ಕೀಟನಾಶಕದ ಪಿಡುಗುಗಳು '', ''ನಮ್ಮ ಪರಮಾಣು ಚೈತನ್ಯ - ಉತ್ಪಾದನಾ ಸಾಧನಗಳು'' ''ನಮ್ಮ ಸುತ್ತಲಿನ ಕಡಲು'' ಇತ್ಯಾದಿ.

ಡಾ। ಕಾರಂತರು ನಿಸರ್ಗ ಪ್ರೇಮಿ. ನಮ್ಮ ಪ್ರಾಂತದ ಮಲೆನಾಡನ್ನಂತೂ ಅವರು ಸುತ್ತಿದ್ದು ಅಷ್ಟಿಷ್ಟೆಂದಲ್ಲ. ಮರಗಿಡಗಳು, ಹಕ್ಕಿ, ಹಾವು, ಮೃಗಗಳು ಇವೆಲ್ಲ ಕಾರಂತರ ಪ್ರೀತಿ ಭಾಜನವಾದ ಜೀವಿಗಳು. ಹಾಗೆಂದೇ ತಮ್ಮ ಜೀವನದ ತಾರುಣ್ಯದಲ್ಲಿ ಮಕ್ಕಳಲ್ಲಿ ನಿಸರ್ಗದ ಮೇಲೆ ಪ್ರೇಮ ಬೆಳೆಯುವ ಸಲುವಾಗಿ ಪುತ್ತೂರಿನಲ್ಲಿ 'ಬಾಲವನ' ನಿರ್ಮಿಸಿದರು. ಇದು ಬೆಟ್ಟದ ತಪ್ಪಲಿನಲ್ಲಿದ್ದು ಸುತ್ತಮುತ್ತ ಆ ಕಾಲದಲ್ಲಿ ಬೇಕಾದಷ್ಟು ಗಿಡಮರಗಳಿದ್ದವು. ಬಾಲವನದಲ್ಲಿ ಒಂದು ಪುಟ್ಟ ಮೃಗಾಲಯವನ್ನು ಅವರು ನಿರ್ಮಿಸಿ ಮಕ್ಕಳಿಗೆ 'ನೋಡಿ ಕಲಿಕೆ 'ಎನ್ನುವ ತನ್ನ ಸಿದ್ಧಾಂತವನ್ನು ಸಾಬೀತುಗೊಳಿಸಲೆತ್ನಿಸಿದರು. ಅಲ್ಲೇ ಕುಕ್ಕುಟ ಪಾಲನಾಕೇಂದ್ರವನ್ನು ತೆರೆದರು. ಕ್ರಮೇಣ ಕಲಿಕೆಯ ಮಕ್ಕಳ ಉತ್ಸಕತೆಯಲ್ಲಿ ಕುಸಿತ, ಸರಾಕರದ ಉಪೇಕ್ಷೆ ಇದರಿಂದಾಗಿ ಬಾಲವನವನ್ನು ಮುಚ್ಚಬೇಕಾಗಿ ಬಂದುದು ಒಂದು ದುರಂತವೇ ಸರಿ.

ಇಲ್ಲಿ ನಮಗೆ ವ್ಯಕ್ತವಾಗುವುದೇನೆಂದರೆ ಕಾರಂತರು ವೈಜ್ಞಾನಿಕ ಚಿಂತನೆ, ಅಧ್ಯಯನ, ಬರವಣಿಗೆಯಲ್ಲಿ ಮಾತ್ರ ತನ್ನನ್ನು ತೊಡಗಿಸಿಕೊಂಡು ಸುಮ್ಮನಿರದೆ, ತಾನು ತಿಳಿದುಕೊಂಡ ವೈಜ್ಞಾನಿಕ ವಿಷಯಗಳನ್ನು ನಿಜ ಜೀವನದಲ್ಲಿ ಅನುಷ್ಠಾನಕ್ಕೆ ತರಲಾದೀತೆ ಎಂದು ಸದಾ ಯೋಚಿಸುತ್ತ, ಯಾವ ಅನುದಾನ ಅಥವಾ ಆರ್ಥಿಕ ನೆರವಿನ ಬೆಂಬಲವಿಲ್ಲದೆ ಹಟದಿಂದ ಅದನ್ನು ತಾವೇ ಪ್ರತ್ಯಕ್ಷ ಮಾಡಿ ತೋರಿಸುವ ಛಾತಿ ಇದ್ದವರು. ಕಾರಂತರು ನಿಸರ್ಗ ಪ್ರೇಮಿ ಎಂದು ಹೇಳಿದ್ದೇನೆ. ಅವರ ಪ್ರಕಾರ ಈ ನಾಡು, ಕಾಡು, ನೆಲ, ಜಲ ಬರೀ ಮನುಷ್ಯರದು ಮಾತ್ರವಲ್ಲ; ಅದು ಎಲ್ಲ ಜೀವಿಗಳಿಗೂ ಸೇರಿದ್ದು. ಅಂತೆಯೇ ನಾವು ಬಾಳಿಬದುಕುವ ಈ ಭೂಮಿ ಕೇವಲ ನಮಗೆ ಮಾತ್ರ ಸೇರಿದ್ದಲ್ಲ. ಅದು ಭವಿಷ್ಯದ ಜೀವಿಗಳೂ ಭೋಗಿಸಬೇಕಾದ್ದು. ಹೀಗಾಗಿಯೇ ಅವರು ಪರಿಸರದ ಮೇಲೆ ದಾಳಿ ನಡೆದಾಗ ಕುಪಿತರಾಗುತ್ತಾರೆ. ಪರಿಸರವಾದಿಗಳಿಗೆ ಸ್ಪಷ್ಟ ತಿಳುವಳಿಕೆ ನೀಡಿ ಮಾರ್ಗದರ್ಶನ ಮಾಡುತ್ತಾರೆ. ಸರಕಾರವೇ ಇರಲಿ, ಖಾಸಗಿ ಸಂಸ್ಥೆಯೇ ಇರಲಿ ಪರಿಸರ ಸಮತೋಲನಕ್ಕೆ ಭಂಗ ತಂದಲ್ಲಿ ನ್ಯಾಯಾಲಯದ ಕಟ್ಟೆಯನ್ನೂ ಹತ್ತುತ್ತಾರೆ.

ಪರಿಸರ ಜಾಗೃತಿಯ ಕುರಿತು ಕಾರಂತರು ಬರೆದ ಲೇಖನಗಳಿಗೆ, ನೀಡಿದ ಭಾಷಣಗಳಿಗೆ ಲೆಕ್ಕವಿಲ್ಲ. ಪರಿಸರ ಸಂರಕ್ಷಣೆಯ ಚಳವಳಿಯಲ್ಲೂ ಸಾಕಷ್ಟು ಭಾಗವಹಿಸಿದ ಕಾರಂತರು ''ಭಾರತದ ಪರಿಸರದ ಪರಿಸ್ಥಿತಿ'' ''ಭಾರತದ ಪರಿಸರ ದ್ವಿತೀಯ ಸಮೀಕ್ಷೆ'' ಎನ್ನುವ ಪ್ರಜೆಗಳ ವರದಿಯ ಎರಡು ಗ್ರಂಥಗಳನ್ನು ಕನ್ನಡಿಸಿ, ನಮ್ಮ ಜನರಲ್ಲಿ ಸುತ್ತಮುತ್ತ ಏನಾಗುತ್ತಿದೆ ಇವೆಲ್ಲ ಏಕೆ ಆಗಬಾರತಕ್ಕದ್ದಲ್ಲ ಎನ್ನುವ ಪ್ರಜ್ಞೆ ಮೂಡಿಸಿದ್ದಾರೆ. ಇವಲ್ಲದೆ ''ಕೀಟನಾಶಕಗಳ ಪಿಡುಗುಗಳು'' ''ಜನತೆಯೂ ಅರಣ್ಯಗಳೂ'' ''ಬೆಳೆಯುತ್ತಿರುವ ಸಮಸ್ಯೆ ನಮ್ಮೆಲ್ಲರಿಗೂ ಒಂದೇ ಭವಿಷ್ಯ'' ಎನ್ನುವ ಪುಸ್ತಕಗಳನ್ನೂ ಅನುವಾದಿಸಿ ಪರಿಸರದ ಬಗೆಗಿನ ನಮ್ಮ ತಿಳಿವು ಹೆಚ್ಚಿಸಿದ್ದಾರೆ.

ನಮ್ಮ ಭೂಮಿ, ಕಾಡು, ಪ್ರಾಣಿ ಪಕ್ಷಿಗಳು, ವಾತಾವರಣ, ಪ್ರದೂಷಣೆ ಇತ್ಯಾದಿಗಳ ಕುರಿತು ಅವರು ಬರೆದ ಬಿಡಿ ಲೇಖನಗಳೇ ಸುಮಾರು ೭೮೦ ಪುಟಗಳ ಹೊತ್ತಗೆಯಾಗಿ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ.

ಕಾರಂತರು ಸ್ವಾಭಾವಿಕವಾಗಿಯೇ ಪರಮಾಣು ಶಕ್ತಿ ಸ್ಥಾವರಗಳ ಕುರಿತು ಸತತ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಕೈಗಾ ಪರಮಾಣು ಸ್ಥಾವರದಿಂದ ನಾಳಿನ ತಲೆಮಾರುಗಳಿಗೆ ಏನೆಲ್ಲ ವಿಪತ್ತು ಕಾದಿದೆ ಎಂಬುದನ್ನು ನಾಡಿನ ಮೂಲೆ ಮೂಲೆಯಲ್ಲಿ ಹೇಳುತ್ತಾ ಬಂದಿದ್ದಾರೆ. ಕೆಲ ಪರಿಸರ ವಾದಿಗಳಂತೆ ಅಥವಾ ಪರಮಾಣು ವಿಜ್ಞಾನಿಗಳು ಅಂದುಕೊಂಡಂತೆ ಕಾರಂತರು ಪರಮಾಣುವಿನ ಕುರಿತಾಗಲಿ ಅದರ ಶಾಂತಿಯುತ ಬಳಕೆಯ ಬಗೆಗಾಗಲಿ, ಪರಮಾಣು ಬಾಂಬಿನ ವಿಷಯವಾಗಲಿ ಏನೂ ಅ ರಿಯದವರಲ್ಲ. ಸ್ವಾಧ್ಯಾಯದಿಂದ, ಗೊತ್ತಾಗದುದನ್ನು ವಿಜ್ಞಾನಿಗಳಿಂದ ಕೇಳಿ ಕಲಿತು ತನ್ನ ನಿಲುವು ಸಮರ್ಥನೀಯವೆಂದು ಖಾತ್ರಿಯಾದ ಮೇಲೆಯೇ ಅವರು ತನ್ನ ವಾದ ಮಂಡಿಸುತ್ತಾರೆ. ಕಾರಂತರ ವಾದವಾದ ನರೋರಾ ಪರಮಾಣು ಶಕ್ತಿ ಸ್ಥಾವರ ಭೂಕಂಪ ವಲಯದಲ್ಲಿದೆ ಎಂಬುದನ್ನಾಗಲಿ, ಕೈಗಾ ಸ್ಥಾವರದಿಂದ ವನ ಸಂಪದ್ಭರಿತ ಉತ್ತರಕನ್ನಡ ಜಿಲ್ಲೆ ಶಾಶ್ವತವಾಗಿ ತನ್ನ ಒಂದಿಷ್ಟು ಮಳೆಗಾಡುಗಳನ್ನು ಕಳೆದುಕೊಳ್ಳುತ್ತದೆ ಎಂಬುದನ್ನಾಗಲಿ, ಕಾಳಿ ನದಿಗೆ ಪ್ರದೂಷಣೆ ಒಂದಿಷ್ಟಾದರೂ ಆಗುತ್ತದೆ ಎಂಬುದನ್ನಾಗಲಿ ವಿಜ್ಞಾನಿಗಳಿಗೆ ನಿರಾಕರಿಸಲಾಗದು ದನ್ನು ದಾಖಲಿಸಬೇಕಾಗುತ್ತದೆ.

ಅಮೇರಿಕದ Three Mile Island ದುರಂತ, ಹಾಗೂ ರಷ್ಯದ ಚೆರ್ನೋಬಿಲ್ ಅವಘಡದಿಂದಾದ ಹಾನಿಗಳನ್ನು ಡಾ. ಕಾರಂತರು ತನ್ನ ಭಾಷಣಗಳಲ್ಲಿ, ಲೇಖನಗಳಲ್ಲಿ ದಾಖಲಿಸುತ್ತ ಬಂದಿದ್ದಾರೆ. ''ಕೈಗಾ ಸ್ಥಾವರವು ಸೂಪಾ ಅಣೆಕಟ್ಟಿನ ಸಮೀಪ ಇರುವಂಥದು. ಸೂಪಾ ಜಲಾಶಯ ಭೂಮಿಯ ಬಿರುಕಿನ ಅಂಚಿನಲ್ಲಿದೆ'' ಎನ್ನುವ ಕಾರಂತರ ವಾದವನ್ನು ಉಪಗ್ರಹ ಛಾಯಚಿತ್ರಗಳು ಸಮರ್ಥಿಸಿವೆ. ಇಲ್ಲಿ ಭೂಕಂಪದ ಭಯ ಇದ್ದೇ ಇದೆ - ಕೋಯ್ನಾದಲ್ಲಿ ನಡೆದಂತೆ ಎನ್ನುವ ಅವರ ನ್ಯಾಯವಾದ ಕಾಳಜಿಗೆ ಮಾನ್ಯತೆ ಒದಗಲಿಲ್ಲ. ಭೂಕಂಪವಾದರೂ ಸ್ಥಾವರ ಸ್ಥಿರವಾಗಿರುತ್ತದೆ ಎನ್ನುತ್ತಾರೆ ವಿಜ್ಞಾನಿಗಳು, ಕೈಗಾ ಸ್ಥಾವರದ ತಡೆಗಾಗಿ ವರಿಷ್ಠ ನ್ಯಾಯಾಲಯದಲ್ಲೂ ರಿಟ್ ಸಲ್ಲಿಸಿ ಕಾರಂತರು ತನ್ನ ಸಾಮಾಜಿಕ ಬಾಧ್ಯತೆಯನ್ನು ನೆರವೇರಿಸಿದ್ದಾರೆ.

ಪರಮಾಣು ಶಕ್ತಿಯ ದುರ್ಬಳಕೆ ಮಾತ್ರ ಕಾರಂತರನ್ನು ಕಂಗೆಡಿಸಿದ್ದಲ್ಲ. ಪರಿಸರಕ್ಕೆ ಕೆಡುಕು ತರುವ ಪ್ರತಿಯೊಂದು ವಿಷಯವೂ ಅವರ ಗಮನಸೆಳೆಯದೆ ಬಿಟ್ಟಿಲ್ಲ. ಹರಿಹರ ಪಾಲಿಫೈಬರ್ಸ್ ತುಂಗಭದ್ರಾ ನದಿಯ ನೀರನ್ನು ಕಲುಷಿತಗೊಳಿಸಿ ವಿಷವಾಗಿಸಿದ್ದು, ಬೇಡ್ತಿ ಜಲಾಶಯದಿಂದ ಅರಣ್ಯ ನಾಶವಾಗುತ್ತಿದ್ದುದು, ಶರಾವತಿ ಟೇಲ್‌ರೇಸ್‌ನಿಂದ ಜಗತ್ತಿನಲ್ಲೆ ವೈವಿಧ್ಯದ ಸಸ್ಯಗಳ ನೆಲೆಯಾದ ಪಶ್ಚಿಮ ಘಟ್ಟ ಬೋಳಾಗುವ ಪರಿಸ್ಥಿತಿ ಇದ್ದುದು - ಇವನ್ನೆಲ್ಲ ಖಂಡಿಸಿ ಚಳವಳಿ ನಡೆಸಿದ್ದಾರೆ. ತೀರ ಇತ್ತೀಚೆಗೆ ನಂದಿಕೂರಿನ ಕೋಜೆಂಟ್ರಿಕ್ಸ್, ಎಂ.ಆರ್.ಪಿ.ಎಲ್., ನಾಗಾರ್ಜುನ ಸ್ಟೀಲ್ ಇವುಗಳ ವಿರುದ್ಧವೂ ಸಕಾರಣವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ.

ಪ್ರಗತಿ, ಅಭಿವೃದ್ಧಿಗಳ ಹೆಸರಲ್ಲಿ ನೈಸರ್ಗಿಕ ಸಂಪತ್ತು ನಾಶವಾಗುವುದು ಅವರಿಗೆ ಬೇಕಿಲ್ಲ. ಆದರೆ ಕೆಲ ಪರಿಸರವಾದಿಗಳು ಖಂಡಿಸುವ ನೀಲಗಿರಿ ಬೆಳೆಗಳಿಗೆ ಅವರದು ಅಷ್ಟಾಗಿ ಆಕ್ಷೇಪವಿಲ್ಲ. ಮರುಭೂಮಿಯಲ್ಲೂ ಬೆಳೆಯಬಲ್ಲ ನೀಲಗಿರಿ ಭೂಮಿಯ ಆಳದವರೆಗೆ ಬೇರು ಬಿಟ್ಟು ನೀರು ಹೀರುತ್ತ ಹಸಿರೆಲೆಗಳನ್ನು ನೀಡುವುದಲ್ಲದೆ ಕಾಗದ ಉತ್ಪಾದನೆಗೂ ಇದು ವರದಾನ. ಆದರೆ ನೀಲಗಿರಿ ಮರಗಳನ್ನು ಅತಿಕಡಿಮೆ ಬೆಲೆ ಬಂಡುವಾಳ ಶಾಹಿಗಳಿಗೆ ಮಾರುತ್ತ ಸಮಾಜದ ಹಣವನ್ನು ಪೋಲು ಮಾಡುವ ಸರಕಾರದ ನೀತಿಗೆ ಅವರು ಕ್ರುದ್ಧರಾಗುತ್ತಾರೆ.

ಡಾ। ಕಾರಂತರು ಯಾವುದೇ ವಿಷಯದ ಕುರಿತು ಬರೆಯುವಾಗ ಬಳಸುವ ಭಾಷೆ ತುಂಬ ಸರಳವಾದುದು. ಥಟ್ಟನೆ ಬುದ್ಧಿ ಗ್ರಾಹ್ಯವಾಗು ವಂಥದು. ಉದಾಹರಣೆಗೆ ಮಕ್ಕಳಿಗಾಗಿ ಬರೆದ ಈ ಸಾಲುಗಳನ್ನು ಪರಿಶೀಲಿಸಬಹುದು ಜಮಾಲಗಡ 'ವೆಂಬುದು ''ಕಲ್ಲಿನ ಕಡುಬೊಂದನ್ನು ಕವುಚಿಟ್ಟಂತೆ ಕಾಣುವುದು'' ''ಬೆಟ್ಟವೆಂದರೇನು? ಶಿಲೆಯ ಒಂದು ಗುಂಡು'', ಅಷ್ಟು ಸುಂದರವಾದ ಮನಸೆಳೆಯುವ, ಮಕ್ಕಳು ಕೂಡಲೇ ಅರ್ಥಮಾಡಿಕೊಳ್ಳಬಹುದಾದ ಶಬ್ದಗಳು.

ಕಾರಂತರು ಉಪಯೋಗಿಸುವ ಪಾರಿಭಾಷಿಕ ಶಬ್ದಗಳ ಕುರಿತೂ ಇಲ್ಲಿ ಹೇಳುವುದು ಅಪ್ರಸ್ತುತವಾಗದು. ಇಂಗ್ಲೀಷ್‌ಗೆ ಸಮಾನಾರ್ಥ ಕೊಡಲೆಂದು ಕ್ಲಿಷ್ಟವಾದ ಸಂಸ್ಕೃತ ಶಬ್ದ ಗುಚ್ಛಗಳನ್ನು ಸೃಷ್ಟಿಸುವುದು ನಮ್ಮ ವೈಜ್ಞಾನಿಕ ಲೇಖಕರ ಪರಿಪಾಠ. ಆದರೆ ಕಾರಂತರು ಇದಕ್ಕೆ ಭಿನ್ನ. ಅವರು ಸಲುಭವಾಗಿ ಅರ್ಥವಾಗಬಲ್ಲ ಕನ್ನಡ ಸಮಾನ ಪದಗಳಿಂದ ಅರ್ಥಹೊರಡಿಸಲು ಸಾಧ್ಯವೇ ಎಂದು ನೋಡುತ್ತಾರೆ. ಒಂದೊಮ್ಮೆ ಆದಾಗದಿದ್ದರೆ ಮೂಲದ ಇಂಗ್ಲೀಷ್ ಶಬ್ದವನ್ನು ಇರಿಸಿಕೊಂಡು ಅದರ ಅರ್ಥ ವಿವರ ಒದಗಿಸುತ್ತಾರೆ. ಉದಾ : Crator ಗೆ ಕುಂಡ, Canyin ಗೆ ಕೊರಕಲು, Flipper ಗೆ ತೊಳೆಗೋಲು, Mantle ಗೆ ಕವಚ, Tentacle ಗೆ ಬಳ್ಳಿಗಾಲು Medulla Oblonguta ಗೆ ನೀಳಮಚ್ಚೆ, Repression ಗೆ ದಬ್ಬಾಳಿಕೆ ಹೀಗೆ ಸರಳವಾದ ಪದಗಳು, ಪದಪುಂಜಗಳನ್ನು ಅವರು ಬಳಸುತ್ತಾರೆ.

ಈಗ ಸಂಜೆ ಮುಂಜಾನೆಗಳಿಗೆ ಕಾರಣವೇನು ಎಂಬುದನ್ನು ಕಾರಂತರು ಎಷ್ಟು ಚೆನ್ನಾಗಿ ವಿವರಿಸುತ್ತಾರೆ. ನೋಡೋಣ ''ಸೂರ್ಯ ರಶ್ಮಿಯ ವಕ್ರಿಸುವಿಕೆಯಿಂದ ಬಿಳಿಯ ಬೆಳಕಿನ ಆರು ಬಣ್ಣಗಳು, ವಿವಿಧ ಪರಿಯಾಣಗಳಲ್ಲಿ ಮುರಿಯುತ್ತವೆ. ನೇರಿಳೆ, ನೀಲ, ಹಸುರು ಬಣ್ಣದ ಕಿರಣಗಳು ಮುರಿದು ನೆಲದಿಂದ ಎಷ್ಟೋ ಮೇಲೆಯೇ ಚದರಿ ಹೋಗುತ್ತವೆ. ಉಳಿದ ಕೆಂಪು, ಕಿತ್ತಳೆ, ಹಳದಿ ರಶ್ಮಿಗಳು ಮಾತ್ರ ನಮ್ಮ ಕಣ್ಣನ್ನು ಸೇರುತ್ತವೆ. ಈ ಕಾರಣದಿಂದಲೇ ಸಂಜೆ, ಮುಂಜಾನೆಗಳಲ್ಲಿ ಸೂರ್ಯ ಕೆಂಪು, ಕಿತ್ತಳೆ ಮತ್ತು ಹಳದಿ ಬಣ್ಣಗಳಲ್ಲಿ ಕಾಣಿಸುವ ಸುಂದರ ವಿದ್ಯಮಾನ ಉಂಟಾಗುತ್ತದೆ.

ಡಾ. ಶಿವರಾಮ ಕಾರಂತರ ವೈಜ್ಞಾನಿಕ ಚಿಕಿತ್ಸಕ ದೃಷ್ಟಿಯ ಕುರಿತು ಕನ್ನಡದ ಶಿಕ್ಷಣತಜ್ಞರೊಬ್ಬರು ನೀಡಿದ ಅಭಿಪ್ರಾಯವನ್ನು ಉಲ್ಲೇಖಿಸಿ ನನ್ನ ಪ್ರಬಂಧ ಮುಗಿಸುತ್ತೇನೆ.

''ಕಾರಂತರು ಔಪಚಾರಿಕ ಅರ್ಥದಲ್ಲಿ ಶಿಕ್ಷಣ ತಜ್ಞರೆಲ್ಲ ಅವರು ಹಾಗೆ ಹೇಳಿಕೊಂಡೂ ಇಲ್ಲ. ಆದರೆ ಆರೇಳು ದಶಕಗಳಿಂದ ಶಿಕ್ಷಣ ಸಮಸ್ಯೆಗಳ ಬಗೆಗೆ ಗಾಢವಾದ ಚಿಂತನ ನಡಸಿ ಪ್ರಯೋಗಗಳನ್ನು ಮಾಡಿ, ತಮ್ಮದೇ ಆದ ಸಿದ್ಧಾಂತವನ್ನು ರೂಪಿಸಿಕೊಂಡಿದ್ದಾರೆ. ಈ ತೆರನಾದ ಕಕ್ಕುಲಾತಿ ಮತ್ತು ಗಾಢವಾದ ಆಸಕ್ತಿ ಹಾಗೂ ಚಿಕಿತ್ಸಕ ಪ್ರವೃತ್ತಿ ಅನನ್ಯವಾದುದು. ಓರ್ವ ವಿಜ್ಞಾನಿಯಲ್ಲಿ ಮಾತ್ರ ನಾವು ಇಂಥ ಗುಣವನ್ನು ಕಾಣಬಲ್ಲೆವು, ಕಾರಂತರಲ್ಲಿರುವ ಈ ವೈಜ್ಞಾನಿಕ ಮನೋಧರ್ಮ ಪ್ರತಿಯೊಬ್ಬ ಶಿಕ್ಷಕನಲ್ಲೂ ಇದ್ದಿದ್ದರೆ ನಮ್ಮ ವಿದ್ಯಾಭ್ಯಾಸ ಸ್ಥಿತಿ ಎಷ್ಟೋ ಸುಧಾರಿಸುತಿತ್ತು.

# ತಾಯಿ

ಜೀವನದ ದಾರಿಯಲಿ ಕಾಲಿಟ್ಟ ಯುವ ತಾಯಿ
ಕೇಳಿದಳು ''ಈ ದಾರಿ ಬಹು ದೂರವೇ'' ಎಂದು !
''ಅಹುದು ತಾಯಿ, ಬಹಳ ಕಠಿಣವೂ ಕೂಡ,
ಕೊನೆ ಮುಟ್ಟುವುದರಲಿ ಮುಪ್ಪು ತಟ್ಟುವುದು ನಿನಗೆ,
ಆದರೆ, ಇಂದಿಗಿಂತ ಅಂದೇ ಲೇಸು'' ಎಂದ ಮಾರ್ಗದರ್ಶಿ !
ಹೆದರಲಿಲ್ಲ ಯುವತಾಯಿ
ಒಪ್ಪಲಿಲ್ಲ ಮನ, ಇಂದಿಗಿಂತ ಅಂದು ಲೇಸೆಂದು
ತನ್ನ ಮಕ್ಕಳೊಡನೆ ಆಡಿದಳು, ನಕ್ಕು ನಲಿದಾಡಿದಳು !
ಆಯ್ದಳು ಹೂಗಳನು ಮಕ್ಕಳಿಗಾಗಿ ದಾರಿಯುದ್ದಕ್ಕೂ ಅಂದು
ನೀರಿನಲ್ಲಾಡಿದಳು ಅವರೊಡನೆ ಝುರಿ ತೊರೆಗಳಲಿ ಮಿಂದು
ಭಾನು ಬೆಳಗಿತ್ತಲ್ಲೆಲ್ಲೂ, ''ಇದಕ್ಕಿಂತ ಲೇಸಾದ ದಿನ ಉಂಟೆ'' ಎಂದಳಾಕೆ
ನಂತರ.... ಇರುಳಾಯಿತು
ಕತ್ತಲಾವರಿಸಿತ್ತು ದಾರಿಯನು, ಬಿರುಗಾಳಿ ಬೇರೆ
ಚಳಿಯೊಡನೆ ಹೆದರಿಕೆ ಕೂಡಿ, ನಡುಗಿದರು ಮಕ್ಕಳು !
ಬಾಚಿ ತಬ್ಬಿ ಹೊದೆಸಿದಳು ತನ್ನ ತೋಳಿಂದ ಅವರನ್ನು
ಧೈರ್ಯಗೊಂಡ ಮಕ್ಕಳೆಂದರು ''ಈಗ ನಮಗೇನೂ ಭಯವಿಲ್ಲವಮ್ಮ
ನಿನ್ನೊಡನೆ ಇದ್ದರೆ ನಮಗೇನೂ ಆಗದಮ್ಮ'' ಎಂದು !
ಮರುದಿನ ಬೆಳಗಾಯಿತು
ತಾಯಿ ನಡೆದಳು ಮುಂದೆ, ಹಾದಿಯಲಿ ದುರ್ಗಮ ಬೆಟ್ಟ ಒಂದಿತ್ತು
ಬೆಟ್ಟವೇರುತ್ತಾ ದಣಿದರು ಮಕ್ಕಳು, ತಾಯಿಯೂ ದಣಿದಳು
ಆದರೆ, ದಾರಿಯುದ್ದಕ್ಕೂ ಮಕ್ಕಳಿಗೆ ಹೇಳಿದಳು ''ಸ್ವಲ್ಪ ಸೈರಣೆಯಿಂದ
ನಡೆದರೆ, ನಾವು ಬೆಟ್ಟವನು ದಾಟಿ ಬಿಡುವೆವು'' ಎಂದು
ಬೆಟ್ಟ ದಾಟಿದ ಮಕ್ಕಳು ಅಂದರು ''ಅಮ್ಮ ನೀನಿಲ್ಲದಿದ್ದರೆ ಇದು
ಆಗುತ್ತಿರಲಿಲ್ಲ ಇಂದು !
ಅಂದು ರಾತ್ರಿ
ಮಲಗಿ ನಕ್ಷತ್ರಗಳ ನೋಡುತಿದ್ದಾಗ
ಮನದಲ್ಲಿಯೇ ಅಂದುಕೊಂಡಳು ತಾಯಿ !
''ಇಂದು ನಿನ್ನೆಗಿಂತ ಲೇಸು, ಇಂದು ಹೆಚ್ಚಿದೆ ನನ್ನ ಮಕ್ಕಳ ಸ್ಥೈರ್ಯ
ಕಷ್ಟಗಳು ಬಂದಾಗ ನಿನ್ನೆ ನೀಡಿದ್ದೆ ನಾ ಅವರಿಗೆ ಧೈರ್ಯ
ಇಂದು ಅವನ್ನು ಎದುರಿಸುವ ಶಕ್ತಿ ಅವರಿಗೆ ಬಂದಿದೆ'' ಎಂದು !
ಮರುದಿನ
ಕಾರ್ಮೋಡಗಳು ಸುತ್ತಲು ಆವರಿಸಿದವು
ದ್ವೇಷ, ಯುದ್ಧ, ಕ್ರೌರ್ಯದ ಕಾರ್ಮೋಡಗಳ
ಕತ್ತಲಲ್ಲಿ ತತ್ತರಿಸಿದರು ಮಕ್ಕಳು!
''ಮೇಲೆ ನೋಡಿ, ದಾರಿ ತೋರಿಸುವ ಜ್ಯೋತಿ ಕಾಣಿಸುವುದು''
ಎಂದಳು ತಾಯಿ
ಮೇಲೆ ನೋಡೆ, ಮುಗಿಲಿಗೂ ಆಚೆ,
ಕಣ್ಣುಗಳನ್ನು ಕೋರೆಯುವಂತಹ ಜ್ಯೋತಿ
ಅದನ್ನೇ ಅನುಸರಿಸ ಸಾಗಿದರು ಅವರು, ಪಾರಾದರು ಕತ್ತಲಿನಿಂದ !
ಅಂದು ರಾತ್ರಿ,
''ಇಂದೇ ಅತ್ಯಂತ ಸುದಿನ, ಇಂದು ನಾ ಮಕ್ಕಳಿಗೆ ದೇವರನ್ನು ತೋರಿಹೆ''
ಎಂದುಕೊಂಡಳು ತಾಯಿ
ದಿನಗಳು ಉರುಳಿದವು, ವಾರಗಳು ತಿಂಗಳಾದವು, ತಿಂಗಳುಗಳು ವರ್ಷಗಳಾದವು!
ತಾಯಿಗೆ ವಯಸ್ಸಾಗುತ್ತಾ ಬಂದಿತು, ಬೆನ್ನು ಬಾಗತೊಡಗಿತು.
ಮಕ್ಕಳು ದೃಢವಾಗಿ ಎತ್ತರವಾಗಿ ಬೆಳೆದಿದ್ದರು, ಧೈರ್ಯದಿಂದ ಹೆಜ್ಜೆ
ಇಡುತ್ತಿದ್ದರು,
ದಾರಿ ಕಠಿಣವಾದಾಗ ಎತ್ತಿಕೊಂಡು ಹೋಗುತ್ತಿದ್ದರು ತಾಯಿಯನ್ನು !
ಕೊನೆಗೆ
ಹಾದಿಯಲ್ಲಿ ಒಂದು ಬೆಟ್ಟ ಬಂದಿತು, ಅದರ ಮೇಲೇರಿದಾಗ
ದೂರದಲ್ಲಿ ಒಂದು ಹೊಳೆಯುವ ದಾರಿ,
ಅದರ ಕೊನೆಗೆ ಒಂದು ಮಹಾದ್ವಾರ !
''ನನ್ನ ಪಯಣದ ಕೊನೆಯನ್ನು ಮುಟ್ಟಿದ್ದೇನೆ'' ಎಂದಳು ತಾಯಿ
''ಇಂದೇ ಅಂದಿಗಿಂತ ಲೇಸೆಂಬುದನ್ನು ಅರಿತೆ. ಇಂದು ನನ್ನ ಮಕ್ಕಳು
ನನ್ನ ನೆರವಿಲ್ಲದೆ ಈ ದಾರಿಯಲ್ಲಿ ನಡೆಯಬಲ್ಲರು,
ಅಂತೆಯೇ ನಾಳೆ ಅವರ ಮಕ್ಕಳು''!
ಒಂದೇ ಸ್ವರದಲ್ಲಿ ಹೇಳಿದರು ಮಕ್ಕಳು
''ನೀನು ಆ ಮಹಾದ್ವಾರದಾಚೆ ಹೋದರೂ ಕೂಡ,
ಎಂದೆಂದಿಗೂ ನೀ ನಮ್ಮೊಡನೆಯೇ ಇರುವೆಯಮ್ಮ '' ಎಂದು !
ತಾಯಿ ನಡೆದಳು ಮುಂದೆ, ಮಾಯವಾದಳು ಮಹಾದ್ವಾರದ ಹಿಂದೆ
''ಇಂದು ಅವಳು ಕಾಣದಿರಬಹುದು ನಮಗೆ,
ಆದರೂ ನಮ್ಮೊಡನೆಯೇ ಇರುವಳು ಅವಳು
ಅವಳು ಕೇವಲ ಸ್ಮೃತಿಯಲ್ಲ, ನಮ್ಮ ಜೀವನದ ಒಂದು ಅಂಶ''
ಎಂದರು ಅವರು !
ತಾಯಿಯಾವಾಗಲೂ ನಿನ್ನೊಡನೆಯೇ ಇರುವಳು
ದಾರಿಯಲಿ ನಡೆವಾಗ ಕೇಳುವ ಎಲೆಯೋಸಗೆಯಲ್ಲಿ
ಒಗೆದು ಮಡಿ ಮಾಡಿದ ಬಟ್ಟೆಯ ಶುಭ್ರ ಘಮದಲ್ಲಿ !
ಮೈ ಹಿತವಿಲದೇ ಮಲಿದಾಗ, ಹಣೆಯ ಮೇಲಿಡುವ ಕೈಯಲ್ಲಿ
ನಿನ್ನ ಪ್ರತಿಯೊಂದು ನಗುವಿನಲ್ಲಿ, ಕಂಬನಿಯಲ್ಲಿ
ಅವಳಿಂದ ಹೊರಬಂದ ನೀ, ಹೆಜ್ಜೆ ಹೆಜ್ಜೆಯಲೂ ಅವಳ ಕಾಣುವೇ !
ಕಾಲವಾಗಲಿ, ಮೃತ್ಯುವಾಗಲಿ, ಯಾವುದೂ ಅವಳನ್ನು ನಿನ್ನಿಂದ ಅಗಲಿಸಲಾರದು.

ಮೂಲ : ಇಂಗ್ಲೀಷ್
ಕನ್ನಡಕ್ಕೆ : ಪ್ರಸಾದ್

ಕೃಪೆ : ಇಂಟರ್‌ನೆಟ್

## ಕನ್ನಡ ವಿಭಾಗ, ಮುಂಬಯಿ ವಿ.ವಿ.ಯಲ್ಲಿ ವಿವಿಧ ವಿಶೇಷ ಉಪನ್ಯಾಸಗಳು ಹಾಗೂ ವಿದ್ವತ್ ಅಭಿವಂದನೆ ಮತ್ತು ಕೃತಿಬಿಡುಗಡೆ ಕಾರ್ಯಕ್ರಮ

ಮುಂಬಯಿ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ವಿವಿಧ ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮಂಗಳೂರು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ। ವಿವೇಕ ರೈ ಅವರು ಆಧುನಿಕ ವಿಮರ್ಶೆಯ ಸೈದ್ಧಾಂತಿಕ ನೆಲೆಗಳ ಕುರಿತು ಮಾತನಾಡಿದರು. ವಿಮರ್ಶೆಯ ನಡೆದುಬಂದ ದಾರಿಯನ್ನು ಈ ಸಂದರ್ಭದಲ್ಲಿ ಸೋದಾಹರಣವಾಗಿ ವಿವೇಚಿಸಿದರು. ಮದರಾಸು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಮುಖರಾದ ಡಾ. ಶ್ರೀ ಕೃಷ್ಣಭಟ್ ಅರ್ತಿಕಜೆಯವರು ತಮಿಳುನಾಡಿನ ಭಕ್ತಿ ಪರಂಪರೆಯ ಹಿನ್ನೆಲೆ ಮುನ್ನೆಲೆಗಳನ್ನು ವಿವರಿಸಿದರು. ವಚನ ಸಾಹಿತ್ಯಕ್ಕೆ ಈ ಪರಂಪರೆಯು ಪ್ರೇರಣೆ ನೀಡಿರಬಹುದೆಂದು ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ಡಾ. ಕೆ.ಪಿ. ಭಟ್ ಅವರು ಮಾತನಾಡಿ ಸಂಶೋಧನೆಯು ಉತ್ಪಾದನೆಯಾದ್ದರಿಂದ ಅದು ಸಾಮೂಹಿಕ ಉತ್ಪಾದನೆಯ ಸಂಗತಿಯಾಗುತ್ತಿದೆ. ಸಂಶೋಧನೆಯ ಹೆಸರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆಯುತ್ತಿದ್ದರೂ ಅದರ ಮೌಲ್ಯ ಕುಸಿಯುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು. ಸಂಶೋಧನೆಗೆ ಲಿಖಿತ ದಾಖಲೆಗಳು ಮಾತ್ರ ಆಧಾರವಾಗಿರಬೇಕಿಲ್ಲ ಎಂದು ಅವರು ಹೇಳಿದರು.

ಹಿರಿಯ ನವ್ಯಕವಿ ಅರವಿಂದ ನಾಡಕರ್ಣಿಯವರು ಸಾರ್ವತ್ರಿಕ ಪ್ರತಿಮೆ ಮತ್ತು ದೇಶೀ ಪ್ರತಿಮೆಗಳ ಬಗ್ಗೆ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಅವರು ತಮ್ಮ ಕೆಲವು ಕವಿತೆಗಳನ್ನು ಓದಿದರು.

ಕನ್ನಡ ಕಾದಂಬರಿಕಾರ ವ್ಯಾಸರಾಯ ನಿಂಜೂರ ಅವರು ತಾವು ಕಾದಂಬರಿಕಾರರಾಗಿ ನಡೆದುಬಂದ ದಾರಿಯನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಅವರು ಸಾಹಿತ್ಯದ ಇಂದಿನ ವಿದ್ಯಮಾನಗಳ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತ ಕುಮಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

***

ಮುಂಬಯಿ : ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗು ಸಾಹಿತ್ಯ ಪ್ರಕಾಶನ ಮುಂಬಯಿ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಕನ್ನಡದ ಹಿರಿಯ ಕಾದಂಬರಿಕಾರ ಕುಸುಮಾಕರ ದೇವರ ಗೆಣ್ಣೂರ ಅವರನ್ನು ಅಭಿನಂದಿಸುವ ಹಾಗೂ ಡಾ. ಗಿರಿಜಾ ಶಾಸ್ತ್ರಿ ಅವರ 'ಕಥಾಮಾನಸಿ' ಎಂಬ ಸಂಶೋಧನ ಮಹಾ ಪ್ರಬಂಧದ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಆರಂಭದಲ್ಲಿ 'ಕಥಾಮಾನಸಿ' ಎಂಬ ಕೃತಿಯನ್ನು ಮದರಾಸು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಶ್ರೀ ಕೃಷ್ಣ ಭಟ್ ಅರ್ತಿಕಜೆ ಅವರು ಬಿಡುಗಡೆಗೊಳಿಸಿ ಮಾತನಾಡುತ್ತಾ ಇಲ್ಲಿ ಸ್ತ್ರೀವಾದ ಒಂದು ಪಕ್ವದ ನೆಲೆಗೆ ಬಂದು ನಿಂತಿದೆ ಎಂದವರು ಅಭಿಪ್ರಾಯಪಟ್ಟರು. ಕೃತಿ ಸಮೀಕ್ಷೆಯನ್ನು ಡಾ. ಮಣಿಮಾಲಿನಿ ವಿ.ಕೆ. ಅವರು ಮಾಡಿಕೊಟ್ಟರು. ನಿಖರವಾದ ಖಚಿತವಾದ ಅಧ್ಯಯನದ ನೆಲೆಗಳು ಈ ಕೃತಿಯಲ್ಲಿದೆ ಎಂದವರು ಅಭಿಪ್ರಾಯಪಟ್ಟರು.

ಅನಂತರ ನಡೆದ ವಿದ್ವತ್ ಅಭಿವಂದನೆ ಕಾರ್ಯಕ್ರಮದಲ್ಲಿ 'ಕುಸುಮಾಕರ ದೇವರಗೆಣ್ಣೂರ' ಎಂಬ ಕಾವ್ಯನಾಮದಿಂದ ಕಾದಂಬರಿಗಳನ್ನು ಬರೆದು ಕನ್ನಡ ವಾಙ್ಮಯದಲ್ಲಿ ಹೆಸರು ಮಾಡಿದ ಡಾ. ವಸಂತ ದಿವಾಣಜಿ ಅವರನ್ನು ಶಾಲು ಹೊದಿಸಿ ನೆನಪಿನ ಕಾಣಿಕೆಕೊಟ್ಟು ಗೌರವಿಸಲಾಯಿತು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರ ಅವರು ತಮ್ಮ ಅಭಿನಂದನಾ ಭಾಷಣದಲ್ಲಿ ಕುಸುಮಾಕರ ದೇವರಗೆಣ್ಣೂರ ಅವರು ಕನ್ನಡದ ಅನನ್ಯ ಕಾದಂಬರಿಕಾರರಲ್ಲಿ ಒಬ್ಬರು. ಅವರದು ಪೂರ್ಣ ದೃಷ್ಟಿ; ಬೆರಳೆಣಿಕೆಯ ಕೃತಿಗಳನ್ನು ಅವರು ಕನ್ನಡಕ್ಕೆ ನೀಡಿದರೂ ಕನ್ನಡ ಕಾದಂಬರಿ ಲೋಕಕ್ಕೆ ಹೊಸ ಆಯಾಮವನ್ನು ನೀಡಿದರು. ಇಂತಹ ಗಮನಾರ್ಹ ಲೇಖಕರು ಉಪೇಕ್ಷೆಗೆ ಒಳಗಾಗಿರುವುದು ಕನ್ನಡಿಗರ ದೌರ್ಭಾಗ್ಯ ಎಂದು ನುಡಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ, ಪ್ರೊ. ದಿವಾಣಜಿ ಅವರನ್ನು ಸನ್ಮಾನಿಸಿದ ಡಾ. ವಿವೇಕ ರೈ ಅವರು ಮಾತನಾಡುತ್ತಾ ನವ್ಯದ ಭರಾಟೆಯ ದಿನಗಳಲ್ಲಿ ಕುಸುಮಾಕರ ದೇವರ ಗೆಣ್ಣೂರ ಅವರ ಕಾದಂಬರಿಗಳು ಓದುಗ ವರ್ಗಕ್ಕೆ ಹೊಸ ದಿಕ್ಕು ದೆಸೆಗಳನ್ನುಗಳನ್ನು ತೋರಿಸಿಕೊಟ್ಟವು. ದಿವಾಣಜಿ ಅವರ ಅನುಭವ ಸ್ಮೃತಿ ಚಿತ್ರಗಳಾಗಿ ಪರಂಪರೆಯ ಜ್ಞಾನವನ್ನು ಕಥನ ರೀತಿಯಲ್ಲಿ ಅವರು ಅಭಿವ್ಯಕ್ತಪಡಿಸಿದ್ದಾರೆಂದು ಡಾ. ರೈ. ಅವರು ಅಭಿಪ್ರಾಯಪಟ್ಟರು.

'ಕಥಾ ಮಾನಸಿ'ಯ ಕುರಿತು ಮಾತನಾಡುತ್ತಾ ಅಧ್ಯಯನದ ಅನೇಕ ಸಾಧ್ಯತೆಗಳನ್ನು ಈ ಕೃತಿಯಲ್ಲಿ ಕಾಣಬಹುದು ಎಂದು ಅವರು ನುಡಿದರು. ಇದೇ ಸಂದರ್ಭದಲ್ಲಿ, ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸ ಮಂಡಳಿಯ ನೂತನ ಅಧ್ಯಕ್ಷರಾದ ಡಾ. ಸಂಜೀವ ಶೆಟ್ಟಿ ಅವರನ್ನು ಗೌರವಿಸಲಾಯಿತು. ಹಿರಿಯ ಕಾದಂಬರಿಕಾರ ಯಶವಂತ ಚಿತ್ತಾಲ, ಕತೆಗಾರ್ತಿ ಮಿತ್ರಾವೆಂಕಟ್ರಾಜ್, ತುಳಸಿವೇಣುಗೋಪಾಲ್, ಕವಿ ಅರವಿಂದ ನಾಡಕರ್ಣಿ ಮೊದಲಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಡಾ. ಜಿ. ಡಿ. ಜೋಷಿ ಅವರು ಸ್ವಾಗತಿಸಿದರು. ಡಾ. ಜಿ. ಎನ್. ಉಪಾಧ್ಯ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಡಾ. ದಿವಾಣಜಿ ಅವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ತನ್ನ ಮೇಲೆ ಬೇಂದ್ರೆ ಅವರ ಪ್ರಭಾವ ಗಾಢವಾಗಿದೆ. ಬೇಂದ್ರೆಯವರಿಂದ ಹೊಸ ಲೋಕ ದೃಷ್ಟಿ ನನ್ನಲ್ಲಿ ಮೂಡುವಂತಾಯಿತು ಎಂದು ತಮ್ಮ ಹಾಗೂ ಬೇಂದ್ರೆ ಅವರ ಒಡನಾಟದ ನೆನಪುಗಳನ್ನು ಸ್ಮರಿಸಿದರು.

### ಸಂತ ಕಕ್ಕಯ್ಯ ಮ.ನ.ಪಾ. ಕನ್ನಡ ಶಾಲೆ. ಧಾರಾವಿ

ಧಾರಾವಿ ಕನ್ನಡ ಶಾಲೆಗೆ ತಮ್ಮನ್ನು ಅರ್ಪಿಸಿಕೊಂಡು ಮಾದರಿಯ ಶಾಲೆಯನ್ನಾಗಿ ಮಾಡಿದ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ವಿಜೇತೆ ಶ್ರೀಮತಿ ಲೀಲಾ ಆರ್. ಉಚ್ಚಿಲ್ ಓರ್ವ ಪ್ರತಿಭಾವಂತ ಶಿಕ್ಷಕಿ ಮಾತ್ರವಲ್ಲದೆ ಯೋಗ್ಯ ಆಡಳಿತೆಗಾರ್ತಿಯಾಗಿಯೂ ಹೆಸರು ಪಡೆದಿದ್ದಾರೆ ಎಂದು ಮ.ನ.ಪಾ ದಕ್ಷಿಣ ಭಾರತೀಯ ಭಾಷೆಗಳ ವಿಭಾಗದ ಅಧೀಕ್ಷಕಿ ಶ್ರೀಮತಿ ಶಾಂಭವೀ ಜೋಗಿಯವರು ಬೀಳ್ಕೊಡುವ ಮತ್ತು ಸನ್ಮಾನ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು.

ಕನ್ನಡಕ್ಕಾಗಿ ಉತ್ತಮ ಸೇವೆಯನ್ನು ಸಲ್ಲಿಸಿ ವಿದ್ಯಾರ್ಥಿಗಳ ನೆಚ್ಚಿನ ಮುಖ್ಯಾಧ್ಯಾಪಕಿಯಾಗಿ ಪ್ರೀತಿಗಳಿಸಿರುವ ಆದರ್ಶ ಶಿಕ್ಷಕಿ ಲೀಲಾ ಆರ್. ಉಚ್ಚಿಲರು ತನ್ನ ನಿವೃತ್ತ ಜೀವನದಲ್ಲಿ ಇನ್ನಷ್ಟು ಉತ್ತಮ ಸೇವೆಯನ್ನು ಸಲ್ಲಿಸುವಂತಾಗಲಿ,

Regn. No. TECH/47-202/MBI-2000
Date of Posting : 10-5-2000

ಕನ್ನಡಕ್ಕಾಗಿ ತನ್ನನ್ನು ನಿರಂತರ ದುಡಿಸಿಕೊಳ್ಳುವ ಡಾ. ಸಂಜೀವ ಶೆಟ್ಟಿಯವರನ್ನು ಸನ್ಮಾನಿಸಿದ್ದು ಯೋಗ್ಯವಾಗಿದೆ ಎಂದು ಮುಖ್ಯ ಅತಿಥಿ ಸ್ಥಾನದಿಂದ ಕರ್ನಾಟಕ ಮಲ್ಲ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿಯವರು ಹೇಳಿದರು.

ಶಾಲಾಮುಖ್ಯೋಪಾಧ್ಯಾಯಿನಿ ಲೀಲಾ ಆರ್. ಉಚ್ಚಿಲ್ ಹಾಗೂ ಸೋಮಯ್ಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸಂಜೀವ ಶೆಟ್ಟಿಯವರನ್ನು ಶಾಲು ಹೊದಿಸಿ ಪುಷ್ಪಗುಚ್ಛ ನೀಡಿ ನೆನಪಿನ ಕಾಣಿಕೆ ಫಲವಸ್ತು ಹಾಗೂ ಸನ್ಮಾನ ಪತ್ರವನ್ನು ನೀಡಿ ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳ ಮನಮಂದಿರದಲ್ಲಿ ವಾತ್ಸಲ್ಯಮಯಿ ಕರ್ತವ್ಯ ನಿಷ್ಠೆ, ಪ್ರಾಮಾಣಿಕ ಶಿಕ್ಷಕನು ಆರಾಧ್ಯಮೂರ್ತಿಯಾಗಿ ಸ್ಥಿರವಾಗಿ ನಿಲ್ಲುತ್ತಾರೆ. ಶಿಕ್ಷಕರು ತನ್ನ ವಿದ್ಯಾರ್ಥಿಗಳನ್ನು ಮಕ್ಕಳಂತೆಯೆ ನೋಡಿಕೊಳ್ಳಬೇಕು. ಲೀಲಾ ಉಚ್ಚಿಲರವರು ಈ ಗುಣಗಳಿಂದ ಕೂಡಿರುವ ಉನ್ನತ ಮನಸ್ಸಿನ ಶ್ರೇಷ್ಠ ಶಿಕ್ಷಕಿಯಾಗಿದ್ದಾರೆ. ಅವರ ತ್ಯಾಗ, ಕಾರ್ಯಮೈಖರಿ ಕೆಲಸವನ್ನು ಮಾಡಿ ತೋರಿಸುವ ವಿಧಾನ ಅವರ ವ್ಯಕ್ತಿತ್ವ ವಿಶೇಷವಾಗಿದೆ.

ಮ.ನ.ಪಾ. ಶಾಲೆಗಳ ಬಡ ವಿದ್ಯಾರ್ಥಿಗಳನ್ನು ಬುದ್ಧಿವಂತರನ್ನಾಗಿ ಯೋಗ್ಯರನ್ನಾಗಿ ಮಾಡುವ ಹೊಣೆಗಾರಿಕೆ, ಯೋಗ್ಯ ಕೆಲಸವನ್ನು ಮನಸ್ಸಿಗೆ ತೆಗೆದುಕೊಂಡು ಮಾಡುವ ದಟ, ಸಾಧನೆ ನಮ್ಮಲ್ಲಿ ಬೇಕು ಎಂದು ಮುಖ್ಯ ಅಧ್ಯಾಪಿಕೆ ಲೀಲಾ ಆರ್. ಉಚ್ಚಿಲ್‌ರವರು ಹೇಳಿದರು.

ಹತ್ತಾರು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಜರಿದ್ದರು. ಮ.ನ.ಪಾ. ಕನ್ನಡ ಶಾಲೆಗಳಲ್ಲಿ 38 ವರ್ಷಗಳ ಅರ್ಥಪೂರ್ಣ ಸೇವೆಯನ್ನು ಸಲ್ಲಿಸಿ, ಸರ್ವರಿಂದಲೂ ಗೌರವವನ್ನು ಪಡೆದ ಕೀರ್ತಿ ಶ್ರೀಮತಿ ಲೀಲಾ ಆರ್. ಉಚ್ಚಿಲ್ ಅವರದು. ಕೊನೆಗೆ ಪ್ರೀತಿ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ದೆಹಲಿಯಲ್ಲಿ ಯಶಸ್ವಿಯಾಗಿ ನಡೆದ<br>ರಾಷ್ಟ್ರೀಯ ಕನ್ನಡ ಸಮ್ಮೇಳನ<br>ಕನ್ನಡ ಸಂಸ್ಕೃತಿ ಸಮೃದ್ಧಿಗೆ ಕರೆ

ನವದೆಹಲಿ : ದೆಹಲಿಯಲ್ಲಿ 17ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ಏಪ್ರಿಲ್ 8 ಮತ್ತು 9ರಂದು ಯಶಸ್ವಿಯಾಗಿ ನಡೆಯಿತು. 'ದೆಹಲಿ ಕನ್ನಡಿಗ' ಪತ್ರಿಕೆಯ ಆಶ್ರಯದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶದಾದ್ಯಂತದಿಂದ ಸಾಹಿತಿಗಳೂ ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನ ಉದ್ಘಾಟಿಸಿದ ಕರ್ನಾಟಕದ ಮಹಿಳಾ ಮತ್ತು ಶಿಶು ಕಲ್ಯಾಣ ಸಚಿವೆ ಶ್ರೀಮತಿ ಮೋಟಮ್ಮ ಅವರು ಕನ್ನಡಿಗರು ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯನ್ನು ಸಮೃದ್ಧಿಗೊಳಿಸಿ ವಿಶ್ವಮಟಕ್ಕೇರಿಸ ಬೇಕೆಂದರಲ್ಲದೆ ಮಹಿಳೆಯರು ಕನ್ನಡದ ಹಿತರಕ್ಷಣೆಯಲ್ಲಿ ಅಗ್ರಸ್ಥಾನಗಳಿಸಬೇಕೆಂದು ಕರೆ ನೀಡಿದರು.

ಕರ್ನಾಟಕದ ಮಾಜಿ ಸಚಿವೆ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಭಾಷಾ ಬಾಂಧವ್ಯೋತ್ಸವವನ್ನು, ಸಾಹಿತಿ ಪ್ರೊ. ಸಿ. ಮಹಾದೇವಪ್ಪ ಅವರು ಸಾಹಿತ್ಯೋತ್ಸವವನ್ನೂ, ಮಹಾರಾಷ್ಟ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ| ಜಿ.ಡಿ. ಜೋಶಿ ಅವರು ಏಕೀಕರಣೋತ್ಸವವನ್ನು, ಕಾಶ್ಮೀರ ಕನ್ನಡ ಸಂಘದ ಅಧ್ಯಕ್ಷ ವೀರಣ್ಣ ಇವಳ್ಳಿ ಅವರು ಹೊರನಾಡ ಕನ್ನಡೋತ್ಸವವನ್ನು, ಲೋಕ ಸೇವಾ ಆಯೋಗದ ಸದಸ್ಯ ಡಾ. ಎಲ್. ಸಿದ್ಧವೀ ಗೌಡ ಅವರು ಸಾಂಸ್ಕೃತಿಕೋತ್ಸವವನ್ನೂ, ಗ್ರಂಥಪಾಲಕ ಬಿ.ಎನ್.ರಾವ್ ಅವರು ಪುಸ್ತಕ ಪ್ರದರ್ಶನವನ್ನು ಮಹಿಳಾ ಕಾರ್ಯಕರ್ತೆ ಡಾ. ಸರಳಾ ಗೋಪಾಲನ್ ಅವರು ಮಹಿಳಾ ಉತ್ಸಾಹವನ್ನು ಉದ್ಘಾಟಿಸಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸರ್ಕಾರದ ಆಯುಕ್ತೆ ಶ್ರೀಮತಿ ನೀರಜ ರಾಜ್‌ಕುಮಾರ್ ಅವರು ಕನ್ನಡಿಗರು ಸ್ವಾಭಿಮಾನಿಗಳಾಗಿ ಭಾಷಾಂತರ ಕಾರ್ಯದಿಂದ ಕನ್ನಡ ಬೆಳೆಸಬೇಕೆಂದರು. ಸಮ್ಮೇಳನದಲ್ಲಿ ಅನೇಕ ಖ್ಯಾತ ಕನ್ನಡಿಗರನ್ನು ಸನ್ಮಾನಿಸಲಾಯಿತು.

❀ ❀ ❀

(ಪುಟ 6ರಿಂದ)

## ನಿಜದ ನೆಲೆಯ - ಮುಂಬಯಿ ಪತ್ರ

ಮರೆಯಿಸುವಂತೆ ಹೇಗೆ ಪ್ರಚೋದಿಸಬಲ್ಲದು ಎನ್ನುವುದನ್ನು ಲೇಖಕರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇದು ಬರೇ ಜಯಬಾಲಾ, ಪಿಂಕಿಗೆ ಮಾತ್ರ ಸಂಬಂಧಿಸಿದ್ದಲ್ಲ. ಈ ಮಹಾನಗರದಲ್ಲಿ ನಾಗರಿಕ ಸಂವೇದನೆಗಳು ನಾಶವಾಗುತ್ತಿವೆ. 'ಅನ್ಯಾಯವನ್ನು ಪ್ರತಿಭಟಿಸಲು ಶಕ್ತವಾಗದ ಮನಸ್ಸು ದೇಹಗಳಿಗೆ ಕಾಯಕಲ್ಪ ಆಗಬೇಕಾಗಿದೆ ಎಂಬುದನ್ನು ಮನಃ ಶಾಸ್ತ್ರೀಯ ನೆಲೆಯಲ್ಲಿ ವಿವೇಚಿಸಿದ್ದಾರೆ.

ಸಾಹಿತ್ಯ - ಸಂಸ್ಕೃತಿ ವಿಭಾಗದ ಲೇಖನಗಳು ಕಳೆದ ಶತಮಾನದ ಅಂತ್ಯ ಭಾಗದ ಇಲ್ಲಿನ ವಾಙ್ಮಯ ಪರಿಚಾರಿಕೆಗೆ ಸಂಬಂಧಿಸಿದ ಅನೇಕ ಒಳ ವಿವರಗಳನ್ನು ಹೊತ್ತು ನಿಂತಿದೆ. ಮುಂಬಯಿಯಲ್ಲಿ ಕನ್ನಡ ಗ್ರಂಥ ಪ್ರಕಟಣೆ, ಕರ್ಕಿ ವೆಂಕಟ ರಮಣಶಾಸ್ತ್ರಿ ಸೂರಿ, ಕಣ್ಣಂಗಾರು ರಾಮ ಪಂಜಿ ಮೊದಲಾದವರ ಸಾಹಸ ಸಾಧನೆಗಳ ವೃತ್ತಾಂತವೂ ಈ ಕೃತಿಯಲ್ಲಿ ದಾಖಲಾಗಿದೆ. ಕೆ.ಟಿ. ಅವರು ಸ್ವತಃ ಒಬ್ಬ ಸೃಜನಶೀಲ ಸಾಹಿತಿ. ಅವರ ಸಾಹಿತ್ಯಕ ಆಸಕ್ತಿಯಿಂದಾಗಿ ಇಲ್ಲಿನ ಪತ್ರಗಳು ನಮಗೆ ಬಹು ಆಪ್ತವಾಗುತ್ತವೆ. ಈ ಕಾರಣಕ್ಕಾಗಿಯೇ 'ಕಾರವಾನ್', 'ನನಗೂ ಎಲ್ಲರಂತೆ ಬದುಕುವ ಹಕ್ಕಿಲ್ಲವೇ', 'ಹೂ ಬಿಟ್ಟ ವೃಕ್ಷ- ಮುದುಡಿ ಹೋದ ಕುಸುಮ ' ಮೊದಲಾದ ಲೇಖನಗಳನ್ನು ಓದಿದರೆ ಯಾರ ಕಣ್ಣಂಚೂ ಒದ್ದೆಯಾಗಲೇಬೇಕು. ಅವರ ಗದ್ಯಶೈಲಿ ಸರಳ ಹಾಗೂ ಪರಿಣಾಮಕಾರಿ.

'ಮುಂಬಯಿ ಪತ್ರ' ಕೃತಿಯು, ವಿಚಾರ ಸಂಪತ್ತು, ವಿಷಯ ವೈವಿಧ್ಯ, ಅನುಭವ ವಿಸ್ತಾರ, ಭಾವನಾವಿಲಾಸ, ಅಪಾಕ್ಷಿಕವಾದ ಸಮತೋಲನ, ಪೂರ್ವಗ್ರಹ ಮುಕ್ತ ತೂಕತಪ್ಪದ ವಿಮರ್ಶೆಗಳಿಂದಾಗಿ ಇದೊಂದು ಗಮನಾರ್ಹ ಕೃತಿಯಾಗಿ ಅಂಕಣ ಸಾಹಿತ್ಯದ ಕಣಜವನ್ನು ಸೇರಿದೆ. ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಜಯಂತ ಕಾಯ್ಕಿಣಿ, ಅರವಿಂದ ನಾಡಕರ್ಣಿ ಮೊದಲಾದ ಕನ್ನಡ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಮುಂಬಯಿಯ ನಿಗೂಢಮಯ ಬದುಕನ್ನು ವಾಸ್ತವದ ನೆಲೆಯಲ್ಲಿ ಚಿತ್ರಿಸಿದ್ದರೂ ಅದರ ನಿಜದ ನೆಲೆಯನ್ನು ಕಾಣಲು ನಮಗೆ ಸಾಧ್ಯವಾಗುವುದು ಕೆ.ಟಿ. ಅವರ 'ಮುಂಬಯಿ ಪತ್ರ'ದಲ್ಲಿ ಇದು ಈ ಕೃತಿಯ ಹೆಚ್ಚುಗಾರಿಕೆ.

-- ಡಾ| ಜಿ. ಎನ್. ಉಪಾಧ್ಯ

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38